ಜ್ಯೋತಿಕಾರ್ಯದ ವಾರ್ತಾಪತ್ರ



ಮಹರ್ಷಿ ಅಮರ (1919-1982)

**ಋಷಿಗಳು ಹೇಳಿಕೊಟ್ಟಂತೆ ನಾವು ಧ್ಯಾನವನ್ನು ಕಲಿಸುತ್ತೇವೆ.**

### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದರು.

### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ–ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು

- ★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
- ★ ಪ್ರೀತಿ ನಮ್ಮ ಸ್ವಭಾವ.
- ★ ಮೌನ ನಮ್ಮ ಭಾಷೆ.
- ★ ಧ್ಯಾನ ನಮ್ಮ ಮಾರ್ಗ.
- ★ ಈ ಪ್ರಪಂಚ ನಮ್ಮ ಆಶ್ರಮ.
- ★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.
- ★ ದೇವರು ನಮ್ಮ ಗುರು ; ಋಷಿಗಳು ನಮ್ಮ ಮಾರ್ಗದರ್ಶಿಗಳು

# ತಪೋವಾಣಿ

ಸಂಪುಟ 17 ಸಂಚಿಕೆ 11 ನವೆಂಬರ್ 2020 ರೂ.25

## ಅನಿಸಿಕೆಗಳು

**ಗುರೂಜಿ ಕೃಷ್ಣಾನಂದ**

**ಅನು: ಚಂಪಾ**

**(ಹಿಂದಿನ ವಾರ್ತಾಪತ್ರಗಳಿಂದ ಆಯ್ದ ಭಾಗಗಳು – ಆಗಸ್ಟ್ 2005ರ ಸಂಚಿಕೆ)**

ಮುಂಗಾರು ಚುರುಕಾಗಿದೆ. ಮಳೆಯ ಆರ್ಭಟ ಜೋರಾಗಿದೆ. ಎಲ್ಲೆಡೆ ಪ್ರವಾಹ ಉಂಟಾಗಿದೆ. ಆದರೆ ಇಲ್ಲಿ ಮಳೆಯಿಲ್ಲ. ನಾವು ಮಳೆಗಾಗಿ ಕಾಯುತ್ತಿದ್ದೇವೆ—ಜನರು, ಗಿಡಗಳು ಮತ್ತು ಗದ್ದೆಗಳು. ಮಳೆಯಾಗುವುದೆಂದು ನಮಗೆ ತಿಳಿದಿದೆ. ಸ್ವಲ್ಪ ಸಮಯದ ನಂತರ. ನಮ್ಮ ಭರವಸೆಗಳು ಜೀವಂತವಾಗಿವೆ, ಏಕೆಂದರೆ ದೇವರಿದ್ದಾನೆ. ನಾವು ಹೆಚ್ಚು ಪ್ರಾರ್ಥಿಸಬೇಕು ಮತ್ತು ಧ್ಯಾನ ಮಾಡಬೇಕು.

ಒಬ್ಬ ಹುಡುಗ ತನ್ನ ತೋಳುಗಳಲ್ಲಿ ಹೇಗೆ ಕೊನೆಯುಸಿರೆಳೆದನೆಂದು ಒಬ್ಬ ವ್ಯಕ್ತಿ ವಿವರಿಸುತ್ತಿದ್ದ. ಆಗ ಸಂದರ್ಶಕ ಅವನನ್ನು, "ಆ ಸಮಯದಲ್ಲಿ ನಿಮ್ಮ ದೇವರು ಎಲ್ಲಿದ್ದ!" ಎಂದು ಕೇಳಿದ. ಅಂತಹ ಪ್ರಶ್ನೆಗಳಿಗೆ ಒಂದು ಸಾಲಿನ ಉತ್ತರ ಕೊಡಲಾಗುವುದಿಲ್ಲ. ಆದರೆ ಉತ್ತರಗಳಿವೆ. ಅದಕ್ಕಾಗಿ ನಾವು ಸಂಬಂಧಪಟ್ಟ ಅನೇಕ ವಾಸ್ತವಗಳನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಕೆಲವು ವಾಸ್ತವಗಳು ತಿಳಿದಿವೆ ಹಾಗೂ ಅನೇಕ ವಾಸ್ತವಗಳು ತಿಳಿದಿಲ್ಲ. ನಾವು ಆಳವಾದ ಚಿಂತನೆಗಳಲ್ಲಿ ಮತ್ತು ಧ್ಯಾನಗಳಲ್ಲಿ ಸತ್ಯಗಳನ್ನು ಅರ್ಥಮಾಡಿಕೊಳ್ಳಬೇಕು. ನಮ್ಮ ಅಂತರ್‌ಗ್ರಹಣ ಶಕ್ತಿಯಿಂದ ನಾವು ಅವುಗಳನ್ನು ಗ್ರಹಿಸಬೇಕು. ನಾವು ಸತ್ಯವನ್ನು ಅನುಭವಿಸಬೇಕು. ನಾವು ಭಗವಂತನನ್ನು ಅನುಭವಿಸಬೇಕು, ಅವನೇ ಸತ್ಯ ಹಾಗೂ ಅವನೇ ಸೃಷ್ಟಿ ಮತ್ತು ವಿನಾಶದ ಹಿಂದಿನ ಶಕ್ತಿ; ಅವನೇ ಬದುಕು ಮತ್ತು ಸಾವಿನ ಹಿಂದಿನ ಶಕ್ತಿ. ಅದು ಸಮಯ ತೆಗೆದುಕೊಳ್ಳುತ್ತದೆ.

ಬದುಕು ಮತ್ತು ಸಾವಿನ ಹಿಂದಿರುವ ಪ್ರಜ್ಞಾನ ಮತ್ತು ನ್ಯಾಯವನ್ನು ಅರ್ಥಮಾಡಿಕೊಳ್ಳಬೇಕಾದರೆ, ನಾವು ಮಾನವ ತರ್ಕ ಮತ್ತು ಬುದ್ಧಿಯನ್ನು ಮೀರಿ ಹೋಗಬೇಕು. ನಾವು ನಮ್ಮ ಅನ್ವೇಷಣೆಯನ್ನು ಆಳವಾದ ಧ್ಯಾನದಲ್ಲಿ ಆರಂಭಿಸಬೇಕು.

ಇಪ್ಪತ್ತೂರು ವರ್ಷಗಳ ಹಿಂದೆ ತಮ್ಮ ಭೌತ ಶರೀರವನ್ನು ತ್ಯಜಿಸಿದ ಮಹರ್ಷಿ ಅಮರರವರ ಜೀವನ ಮತ್ತು ಬೋಧನೆಗಳ ಬಗ್ಗೆ ನಾವು ಈಗ ಸುಪರಿಚಿತರಾಗಿದ್ದೇವೆ. ನಾವು ಅವರ ಜ್ಞಾನದ ಬೆಳಕಿನಲ್ಲಿ ಬಾಳುತ್ತಿದ್ದೇವೆ. ಅಂತಿಮ ವಾಸ್ತವವಾದ ದೇವರನ್ನು ತಲುಪಲು ಅವರ ಕ್ರಾಂತಿಕಾರಿ ಮಾರ್ಗಗಳ ತೇಜಸ್ಸಿನಿಂದ ನಾವು ಬೆರಗಾಗುವುದನ್ನು ನಿಲ್ಲಿಸಲು ಇನ್ನೂ ಸಾಧ್ಯವಾಗಿಲ್ಲ.

ಮೂಢನಂಬಿಕೆ ಮತ್ತು ಕಂದಾಚಾರಗಳ ಕಬಂಧ ಬಾಹುಗಳಿಂದ ನಮ್ಮನ್ನು ಮುಕ್ತಗೊಳಿಸಿಕೊಳ್ಳಲು ಅವರು ಕಲಿಸಿದರು. ಬುದ್ಧಿಶಕ್ತಿಯಿಂದ ಪಡೆದ ಜ್ಞಾನದ ಇತಿಮಿತಿಗಳಿಂದಲೂ ನಮ್ಮನ್ನು ನಾವು ಮುಕ್ತಗೊಳಿಸಿಕೊಳ್ಳಬೇಕು. ಸಾಕ್ಷಾತ್ಕಾರ ಉಂಟಾಗುವುದು ಅನುಭವದಿಂದ ಹಾಗೂ ಅನುಭವದಿಂದ ಮಾತ್ರ ಎಂದು ಅವರು ಕಲಿಸಿದರು.

ಧ್ಯಾನವೇ ಜ್ಞಾನೋದಯದ ಮಾರ್ಗವೆಂದು, ಅವರು ಧ್ಯಾನಕ್ಕೆ ಅತ್ಯಂತ ಹೆಚ್ಚಿನ ಪ್ರಾಶಸ್ತ್ಯ ನೀಡಿದರು. ಒಂಬತ್ತು ವರ್ಷವಾಗಿದ್ದಾಗಲೇ ಒಬ್ಬ ಮಹಾನ್ ಋಷಿಗಳಿಂದ ಧ್ಯಾನದ ವಿಜ್ಞಾನವನ್ನು ನೇರವಾಗಿ ಪಡೆದ ಅಮರರವರಿಗೆ ಧ್ಯಾನವೇ ನವಯುಗದ ಮಾರ್ಗವೆಂದು ಅರಿವಿತ್ತು ಹಾಗೂ ಅದಕ್ಕೆ ಒತ್ತುಕೊಟ್ಟರು.

ಅವರ ಮಹಾಸಮಾಧಿಯ ವಾರ್ಷಿಕೋತ್ಸವದ ದಿನ ಸಮೀಪಿಸುತ್ತಿರುವಂತೆ, ನಮ್ಮ ಜೀವನಗಳಲ್ಲಿ ಅವರ ಶಾಶ್ವತ ಉಪಸ್ಥಿತಿಯ ನೆನಪಾಗುತ್ತಿದೆ. ನಾವು ಎಲ್ಲಾ ಮಟ್ಟಗಳಲ್ಲಿ ಅವರ ಬೆಳಕಿನಿಂದ ನಮ್ಮ ಜೀವನಗಳನ್ನು ಬೆಳಗಿಸಿಕೊಳ್ಳಬಹುದು ಹಾಗೂ ಎಲ್ಲಾ ಮಟ್ಟಗಳಲ್ಲಿ ಲಾಭ ಪಡೆದುಕೊಳ್ಳಬಹುದು.

ಪ್ರತಿಯೊಂದು ಕೊಲೆ, ಪ್ರತಿಯೊಂದು ಅನ್ಯಾಯ ಮತ್ತು ಅಪ್ರೇಮ, ಹರಿಸಿದ ಮತ್ತು ಹರಿಸದ ಪ್ರತಿಯೊಂದು ಕಂಬನಿ ನಮ್ಮ ಮನಸ್ಸಾಕ್ಷಿಯನ್ನು ಸ್ಪರ್ಶಿಸುತ್ತದೆ, ಆತ್ಮಗಳಲ್ಲಿರುವ ಅಂಧಕಾರವನ್ನು ತೊಡೆದುಹಾಕಲು ನಾವು ಹೆಚ್ಚು ಧ್ಯಾನ ಮಾಡಬೇಕು. ಅದು ನಮ್ಮ ಕೆಲಸ. ■

ಮಾನಸ ಫೌಂಡೇಶನ್ (ರಿ)
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560077. ಭಾರತ.
✆ 99000 75280 (ಬೆಳಗ್ಗೆ 10ರಿಂದ ಸಂಜೆ 5)
ಇ–ಮೇಲ್: info@lightagemasters.com ವೆಬ್‌ಸೈಟ್: www.lightagemasters.com

# ಧ್ಯಾನದ ತರಗತಿಗಳು

ಬೆಂಗಳೂರು ನಗರದ ಎಲ್ಲಾ ಕೇಂದ್ರಗಳಲ್ಲಿನ ಧ್ಯಾನದ ತರಗತಿಗಳನ್ನು ರದ್ದುಗೊಳಿಸಲಾಗಿದೆ. ಕೋವಿಡ್ ಹರಡುವಿಕೆ ಹಾಗೂ ಅದರ ಲಸಿಕೆ ಅಥವಾ ಔಷಧಿ ಲಭ್ಯವಾಗಲು ಬೇಕಾಗಬಹುದಾದ ಸಮಯವನ್ನು ಗಮನದಲ್ಲಿರಿಸಿಕೊಂಡು, ಬೆಂಗಳೂರು ನಗರದ ಕೇಂದ್ರಗಳಲ್ಲಿನ ತರಗತಿಗಳನ್ನು ಮಾರ್ಚ್ 2021ನೇ ಇಸವಿಯವರೆಗೆ ನಡೆಸಲಾಗುವುದಿಲ್ಲ ಎಂದು ನಿರ್ಧರಿಸಲಾಗಿದೆ. ಏಪ್ರಿಲ್ 2021 ರಿಂದ, ಅಂದಿನ ಪರಿಸ್ಥಿತಿಯನ್ನು ಅವಲೋಕಿಸಿ, ತರಗತಿಗಳನ್ನು ಪುನರಾರಂಭಿಸುವ ಬಗ್ಗೆ ನಿರ್ಧರಿಸಲಾಗುತ್ತದೆ.

ಭಾನುವಾರದ ತರಗತಿಗಳು ವೆಬ್ ಕಾಸ್ಟ್ ಮೂಲಕ ಆನ್ ಲೈನ್‌ನಲ್ಲಿ ಮುಂದುವರಿಯುತ್ತದೆ. ಪ್ರತಿ ಭಾನುವಾರ ಬೆಳಿಗ್ಗೆ 10ರಿಂದ 11ರವರೆಗೆ ಪ್ರಾಥಮಿಕ ತರಗತಿಗಳನ್ನು ಕೂಡ ಆನ್ ಲೈನ್‌ನಲ್ಲಿ ನಡೆಸಲಾಗುತ್ತದೆ. ಪ್ರತಿ ತಿಂಗಳ ಮೊದಲನೆ ಭಾನುವಾರ ಹೊಸ ಬ್ಯಾಚ್ ಶುರುವಾಗುತ್ತದೆ.

**ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ-ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.**

**ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ)**
**ಪ್ರಕಾಶ್‌ಮಾರ್ಗ (ಮರಾಠಿ)**
**ವಾರ್ತಾಪತ್ರದ ವಾರ್ಷಿಕ ಚಂದಾ ರೂ. 300/-ಡಿಡಿಯನ್ನು**
**'Manasa Light Age Foundation'**
**ಹೆಸರಿನಲ್ಲಿ ಕಳುಹಿಸಬೇಕು.**
**ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.**

## ಮಾಸ ಪತ್ರಿಕೆ

**ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾ ದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.**



**ನವೀಕರಣಗೊಂಡ ಗುರೂಜಿಯವರ ಸಮಾಧಿ ಮಂಟಪವನ್ನು ಅಕ್ಟೋಬರ್ 18, 2020ರಂದು ಉದ್ಘಾಟಿಸಲಾಯಿತು.**

## ಸುದ್ದಿ-ಸೂಚನೆಗಳು

- ಗುರೂಜಿಯವರ ಮಹಾಸಮಾಧಿ ದಿನವನ್ನು ದಿನಾಂಕ 29-11-2020 ರಂದು ಆಚರಿಸಲಾಗುವುದು. ಪ್ರಸಕ್ತ ಕೋವಿಡ್ ಪರಿಸ್ಥಿತಿಯ ಪ್ರಯುಕ್ತ, ಧ್ಯಾನಿಗಳು ತಪೋನಗರದಲ್ಲಿ ಸೇರುವುದು ಸಾಧ್ಯವಾಗುವುದಿಲ್ಲ. ವಿದ್ಯಾರ್ಥಿಗಳು ನೇರ ವೆಬ್‌ಕಾಸ್ಟ್ ಮೂಲಕ ಭಾಗವಹಿಸಬಹುದು.
- ಈ ಕಾರ್ಯಕ್ರಮದಲ್ಲಿ 2021ನೇ ವರ್ಷದ ಮಾನಸ ಕ್ಯಾಲೆಂಡರ್‌ಅನ್ನು ಸಹ ಬಿಡುಗಡೆ ಮಾಡಲಾಗುವುದು. ಅದನ್ನು ಕೋರಿದವರಿಗಾಗಿ ಮಾತ್ರ, ಸೀಮಿತ ಸಂಖ್ಯೆಯ ಪ್ರತಿಗಳನ್ನು ಮುದ್ರಿಸಲಾಗುವುದು. ನಿಮ್ಮ ಪ್ರತಿಯನ್ನು ಕಾದಿರಿಸುವುದಕ್ಕಾಗಿ ದಯವಿಟ್ಟು 15-11-2020ರ ಒಳಗೆ ರಿಜಿಸ್ಟರ್ ಮಾಡಿ.
- ಶಂಬಲ ಗ್ರೂಪ್‌ನ ಹೊಸ ತಂಡವು 10ನೇ ಜನವರಿ 2021ರಿಂದ ಆರಂಭವಾಗಲಿದೆ. ಚಕ್ರ ಚಾಲನೆಯ ಹಂತದ ಸಾಧನೆಯನ್ನು ಪೂರ್ಣಗೊಳಿಸಿರುವ ವಿದ್ಯಾರ್ಥಿಗಳು ಶಂಬಲ ಗ್ರೂಪ್‌ಅನ್ನು ಸೇರಬಹುದು. ಈ ಗ್ರೂಪ್‌ಗೆ ಸೇರಬಯಸುವವರು 31ನೇ ಡಿಸೆಂಬರ್ 2020ರ ಒಳಗೆ ತಮ್ಮ ಹೆಸರನ್ನು ಮಾನಸ ಕಛೇರಿಯಲ್ಲಿ ನೊಂದಾಯಿಸಿಕೊಳ್ಳಬಹುದು. ದೂರಕಲಿಕೆಯ ವಿದ್ಯಾರ್ಥಿಗಳೂ ಕೂಡ ಸೇರಬಹುದು. ಶಂಬಲ ಗ್ರೂಪ್‌ನಲ್ಲಿ ಈಗಾಗಲೇ ಇರುವ ಸದಸ್ಯರು ಕೂಡ ಮಾನಸ ಕಛೇರಿಯಲ್ಲಿ ತಮ್ಮ ಹೆಸರನ್ನು 31ನೇ ಡಿಸೆಂಬರ್ 2020ರ ಒಳಗೆ ನೊಂದಾಯಿಸಿಕೊಳ್ಳುವ ಮೂಲಕ ತಮ್ಮ ಸದಸ್ಯತ್ವವನ್ನು ನವೀಕರಿಸಬೇಕು.

## ಗುರೂಜಿಯವರ ಮಹಾಸಮಾಧಿ ಕಾರ್ಯಕ್ರಮ
### ಭಾನುವಾರ 29-11-2020

| | |
|---|---|
| ಬೆಳಿಗ್ಗೆ 11 | ಸ್ವಾಗತ |
| | ಭಾಷಣಗಳು |
| | ವಿಶೇಷ ಧ್ಯಾನ |
| ಮಧ್ಯಾಹ್ನ 12-30 | ಪ್ರಸಾದ |

**ನವೆಂಬರ್ 30ರಂದು ಮಧ್ಯಾಹ್ನ 1.02ರಿಂದ ಸಂಜೆ 5.23ರವರೆಗೆ ಚಂದ್ರಗ್ರಹಣ ಇರುತ್ತದೆ. ದಯವಿಟ್ಟು ಗ್ರಹಣದ ಪೂರ್ಣ ಅವಧಿಯಲ್ಲಿ ಇಡೀ ಪ್ರಪಂಚಕ್ಕೆ ಲೈಟ್ ಚಾನೆಲ್ ಮಾಡಿ.**

## ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 09 | ಸೋಮ | ಕೃಷ್ಣ ಅಷ್ಟಮಿ |
| 13 | ಶುಕ್ರ | ಮಾಸ ಶಿವರಾತ್ರಿ |
| 14 | ಶನಿ | ನರಕ ಚತುರ್ದಶಿ<br>ದೀಪಾವಳಿ<br>ಮಹಾಲಕ್ಷ್ಮಿಯ ಪೂಜೆ |
| 15 | ಭಾನು | ಅಮಾವಾಸ್ಯೆ |
| 16 | ಸೋಮ | ಬಲಿ ಪಾಡ್ಯಮಿ |
| 22 | ಭಾನು | ಶುಕ್ಲ ಅಷ್ಟಮಿ |
| 23 | ಸೋಮ | ಗುರೂಜಿಯವರ ಮಹಾಸಮಾಧಿ ದಿನ |
| 24 | ಮಂಗಳ | ಶುಕ್ಲ ದಶಮಿ |
| 29 | ಭಾನು | ಗುರೂಜಿಯವರ ಮಹಾಸಮಾಧಿ ಕಾರ್ಯಕ್ರಮ<br>ಶಿವ ದೀಪ |
| 30 | ಸೋಮ | ಪೂರ್ಣಿಮಾ<br>ವಿಷ್ಣು ದೀಪ<br>ಚಂದ್ರ ಗ್ರಹಣ : ಮಧ್ಯಾಹ್ನ 1.02 ರಿಂದ ಸಂಜೆ 5.23 ರವರೆಗೆ |

## ಈ ತಿಂಗಳು ತಪೋನಗರದಲ್ಲಿ

ಸದ್ಯದಲ್ಲಿ ಎಲ್ಲಾ ಕಾರ್ಯಕ್ರಮಗಳನ್ನು ವರ್ಚುವಲ್ ಆಗಿ ವೆಬ್‌ಕಾಸ್ಟ್ ಮೂಲಕ ನಡೆಸಲಾಗುತ್ತಿದೆ ಮತ್ತು ಸದ್ಯಕ್ಕೆ ತಪೋನಗರದಲ್ಲಿ ಯಾವುದೇ ರೀತಿಯ ಭೌತಿಕ ಸಭೆಗಳು ಇರುವುದಿಲ್ಲ.

| | |
|---|---|
| ಭಾನುವಾರಗಳು | : ಉಪನ್ಯಾಸಗಳು :<br>ಬೆಳಿಗ್ಗೆ 11ರಿಂದ ಮಧ್ಯಾಹ್ನ 12<br>ಲೈಟ್ ಚಾನೆಲಿಂಗ್:<br>ಮಧ್ಯಾಹ್ನ 12 ರಿಂದ 1ರವರೆಗೆ |
| 08-11-2020 | ಮಧ್ಯಾಹ್ನ 2ಕ್ಕೆ ವೆಬ್‌ಕಾಸ್ಟ್ ಮೂಲಕ ಶಂಬಲ ಗ್ರೂಪ್ ಸಂಧಿಸುತ್ತದೆ |
| 15-11-2020 | ಮಧ್ಯಾಹ್ನ 2ಕ್ಕೆ ವೆಬ್‌ಕಾಸ್ಟ್ ಮೂಲಕ ರಾ ಗ್ರೂಪ್ ಸಂಧಿಸುತ್ತದೆ |
| 29-11-2020 | ವೆಬ್‌ಕಾಸ್ಟ್ ಮೂಲಕ ಗುರೂಜಿಯವರ ಮಹಾಸಮಾಧಿ ಕಾರ್ಯಕ್ರಮ |

## ಬಾಗಿಲುಗಳು

**ಉಷಾ ಸತೀಶ್‌ಚಂದ್ರ; ಅನು: ಸುಜಾತ ವಿ**

'ಒಂದು ಬಾಗಿಲು ಮುಚ್ಚಿದಾಗ, ಅನೇಕ ಬಾಗಿಲುಗಳು ತೆರೆಯುತ್ತವೆ,' ಎಂದು ಗುರೂಜಿ ನಮಗೆ ಪದೇಪದೇ ಭರವಸೆ ಕೊಡುತ್ತಿದ್ದರು. ಗುರೂಜಿ ತೀರಿಹೋದ ಮೇಲೆ ಮತ್ತು ಅವರ ಭೌತಿಕ ಸಾಮೀಪ್ಯವು ಕಣ್ಮರೆಯಾದ ಮೇಲೆ, ಅವರು ಸಮಯದ ಮತ್ತು ಬಾಹ್ಯಾಕಾಶದ ಪರಿಮಿತಿಗಳನ್ನು ಮೀರಿದ್ದಾರೆ. ನಾವು ಅವರ ಬಗ್ಗೆ ಯೋಚಿಸಿದರೆ ಸಾಕು ಅವರು ಅಲ್ಲಿಯೇ ಇರುತ್ತಾರೆ, ಸ್ಪಷ್ಟವಾಗಿ ಮತ್ತು ನಿಜವಾಗಿ ಇರುತ್ತಾರೆ. ನಾವು ಅವರ ಗಂಭೀರ ಉಪಸ್ಥಿತಿಗಾಗಿ ಮತ್ತು ಅವರಲ್ಲೇ ಹೊಂದಿರುವ ಮತ್ತು ಅವರು ಸೃಷ್ಟಿಸುವ ದೈವೀ ಪರಿಸರಕ್ಕಾಗಿ ಪ್ರತಿ ಭಾನುವಾರದ ತರಗತಿಯನ್ನು ನಾವು ಎದುರುನೋಡುತ್ತೇವೆ. ಆದರೆ, ಎಂದಿನಂತೆ ಅವರು ತಮ್ಮ ಹೃದಯವನ್ನು ನಮ್ಮ ಮುಂದೆ ಬಿಚ್ಚಿಡಲು, ಋಷಿಗಳ ದೃಷ್ಟಿಕೋನದಿಂದ ಜೀವನದ ಪಾಠವನ್ನು ಹಂಚಿಕೊಳ್ಳಲು, ಯಾವಾಗಲೂ ಅತ್ಯಾಸಕ್ತಿಯಿಂದ ಕಾಯುತ್ತಿದ್ದರು.

ಗುರೂಜಿ ನಮ್ಮ ಅನುಭವಗಳನ್ನು ವೃದ್ಧಿಸಿದ್ದಾರೆ ಹೇಗೆಂದರೆ, ಅವರ ಇರುವಿಕೆಯನ್ನು ನಾವು ಸೌಂದರ್ಯಗಳಲ್ಲಿ ಅನುಭವಿಸಬಹುದು. ಅವೇನೆಂದರೆ ಸೂರ್ಯೋದಯ, ಸೂರ್ಯಾಸ್ತ, ಸುಂದರವಾದ ಹಾಡು, ವಿಶಾಲವಾದ ಆಕಾಶ, ಮತ್ತು ಅರಳುವ ಹೂವಿನಲ್ಲಿರುವ ಅಂದ. ಅವರು ಜೀವನದ ಎಲ್ಲಾ ಅಂಶವನ್ನು ಸ್ಪರ್ಶಿಸಿದ್ದಾರೆ. ಅವರನ್ನು ವಿವರಿಸಲು ಪದಗಳೇ ಸಾಕಾಗುವುದಿಲ್ಲ. ಅವರನ್ನು ನಾವು ಅನುಭವಿಸಬೇಕು. ತಮ್ಮ ಆತ್ಮೀಯ ನಗು ಮತ್ತು ಮೃದುತ್ವದೊಂದಿಗೆ ಸೇವಾವೃತ್ತಿಯಲ್ಲಿದ್ದ, ಉಪಾಹಾರ ಗೃಹದಲ್ಲಿದ್ದ ಒಬ್ಬ ಸಭ್ಯ ವ್ಯಕ್ತಿಯ ಚಿತ್ರಣ ಇನ್ನೂ ನನ್ನಲ್ಲಿ ಉಳಿದಿದೆ. ನಾನು ಅವರ ಪ್ರೀತಿಯನ್ನು ಅನುಭವಿಸಬಹುದಾಗಿತ್ತು. ಗುರೂಜಿರವರ ಅಭಿವ್ಯಕ್ತಿಯನ್ನು ನಾನು ಅನುಭವಿಸಬಹುದಾಗಿತ್ತು!

ಆ ರೀತಿಯಲ್ಲಿ, ಗುರೂಜಿಯವರ ಎಲ್ಲಾ ಅನುಯಾಯಿಗಳೂ ಆಧ್ಯಾತ್ಮಿಕದ ವಿಜ್ಞಾನಿಗಳಾಗುತ್ತಾರೆ. ನಮ್ಮ ಬದುಕಿನಲ್ಲಿ, ಮತ್ತು ನಮ್ಮ ಸಾಧನೆಯಲ್ಲಿ ನಾವು ಗುರೂಜಿಯವರ ಮಾತುಗಳನ್ನು ಮತ್ತು ಅವರ ಜೀವನವನ್ನು ಪರಿಶೀಲಿಸುತ್ತೇವೆ. ನಮ್ಮಲ್ಲಿ ಅವರ ಬೆಳಕು ಇದೆ. ಅವರು ತಮ್ಮ ಜ್ಞಾನದಿಂದ ಮತ್ತು ಅನುಭವಗಳಿಂದ ನಮ್ಮನ್ನು ಎಷ್ಟು ಸಮೃದ್ಧಗೊಳಿಸಿದ್ದಾರೆ ಎಂದರೆ ನಮ್ಮ ಜೀವನದ ಹೆಚ್ಚಿನ ಭಾಗವನ್ನು ಅವರೇ ಆಕ್ರಮಿಸುತ್ತಾರೆ. ಅವರೇ ನಮ್ಮ ಪ್ರಪಂಚ. ಜೀವನದ ಪ್ರತಿ ಕ್ಷಣದಲ್ಲಿಯೂ ಅವರ ಕನಸಾದ ಹೊಸ ಯುಗವನ್ನು ಹುಡುಕುವುದಕ್ಕಾಗಿ ಹಾತೊರೆಯದಿರಲು ನಮಗೆ ಸಾಧ್ಯವಾಗದು. ಹಾಗಿದ್ದರೂ, ಅವರ ಪ್ರಪಂಚವನ್ನು ಮರುಸೃಷ್ಟಿಸುವುದಕ್ಕಾಗಿ ನಮ್ಮ ಕಾರ್ಯಗಳನ್ನು ಸರಿಹೊಂದಿಸಬೇಕು. ನಮ್ಮ ಧ್ಯಾನಗಳಿಂದ ಮತ್ತು ನಾವು ಸಕಾರಾತ್ಮಕರಾಗುವುದರ ಮೂಲಕ ಅವರನ್ನು ಪಾಲಿಸಲು ಮತ್ತು ಅಭಿವ್ಯಕ್ತಿಸಲು ಮಾಡುವ ಪ್ರಜ್ಞಾಪೂರ್ವಕ ಪ್ರಯತ್ನ ಮುಂದುವರೆಯುತ್ತದೆ. ಅವರ ಕನಸುಗಳು ಮತ್ತು ಬೆಳಕನ್ನು ಹಸ್ತಾಂತರಿಸುವುದಕ್ಕಾಗಿ, ಮಹಾನ್ ಪ್ರೀತಿ ಮತ್ತು ಅತ್ಯಂತ ನಮ್ರತೆಯೊಂದಿಗೆ ನಮ್ಮ ಮಾಸ್ಟರ್‌ರ ಬಾಗಿಲುಗಳಾಗಲು ನಾವು ನಿರ್ಧರಿಸಬಹುದು.

## ಲೈಟ್ ಚಾನಲಿಂಗ್ ಅನುಭವಗಳು ಮತ್ತು ಶಾಲೆಗಳಿಂದ ಬಂದ ಪ್ರತಿಕ್ರಿಯೆಗಳು

**ಸಂ: ವೈಶಾಲಿ ಜೋಶಿ; ಅನು: ಸುಜಾತ ವಿ**

ಲೈಟ್ ಚಾನೆಲಿಂಗ್ ಬಹಳ ಪ್ರಭಾವಶಾಲಿಯಾದ ತಂತ್ರ. ನನಗೆ ಯೋಚನೆ ಮಾಡಿ ಕಾರ್ಯ ನಿರ್ವಹಿಸುವುದಕ್ಕೆ ಅದು ಸಹಾಯ ಮಾಡುತ್ತದೆ. ನನಗೆ ಯಾವುದೇ ವಿಚಾರ ಅಥವ ಆಲೋಚನೆಗಳು ಸಿಗದಿದ್ದಲ್ಲಿ, ಅದು ನಾನು ಶಾಂತವಾಗಿದ್ದು ನಿಧಾನಾಗಿ ಯೋಚಿಸಿ ಉತ್ತಮವಾದ ಹಾಗೂ ಸರಿಯಾದ ನಿರ್ಧಾರವನ್ನು ತೆಗೆದುಕೊಳ್ಳಲು ಸಹಾಯ ಮಾಡುತ್ತದೆ.

**–ಶ್ರೀನಿಧಿ ವಿ., 12ನೇ ತರಗತಿ, ಎಸ್.ಬಿ.ಎಸ್ ಮೂಥ ಗರ್ಲ್ಸ್ ಸೀನಿಯರ್ ಸೆಕಂಡರಿ ಸ್ಕೂಲ್, ವೆಸ್ಟ್ ಮಾಂಬಲಮ್, ಚೆನ್ನೈ**

ನಾನು ಲೈಟ್ ಚಾನೆಲ್ ಮಾಡುವಾಗ, ಅದರ ಜೊತೆ ಸಂಪರ್ಕ ಹೊಂದಲು ನನಗೆ ಸುಲಭವಾಗಿದೆ. ನಾನು ಬೆಳಕು ಹಾಗು ಶಾಂತಿಯ ಕಂಪನವನ್ನು ಅನುಭವಿಸುತ್ತೇನೆ. ಅದು ನನ್ನನ್ನು ಚುರುಕುಗೊಳಿಸಿದೆ.

**–ಪದ್ಮಶ್ರೀ ಎಂ., 12ನೇ ತರಗತಿ, ಎಸ್.ಬಿ.ಎಸ್ ಮೂಥ ಗರ್ಲ್ಸ್ ಸೀನಿಯರ್ ಸೆಕಂಡರಿ ಸ್ಕೂಲ್, ವೆಸ್ಟ್ ಮಾಂಬಲಮ್, ಚೆನ್ನೈ**

ಮುಂಚೆ, ನಾನು ನನ್ನ ಗೆಳೆಯರ ಜೊತೆ ಜಗಳ ಮಾಡುತ್ತಿದ್ದೆ ಮತ್ತು ಯಾವಾಗಲೂ ಕೋಪದಿಂದಿರುತ್ತಿದ್ದೆ ಮತ್ತು ದುಃಖಿತಳಾಗಿರುತ್ತಿದ್ದೆ. ಆದರೆ ಲೈಟ್ ಚಾನೆಲ್ ಅಭ್ಯಾಸವನ್ನು ಆರಂಭಿಸಿದ ನಂತರ ನನಗೆ ಚೆನ್ನಾಗಿದೆ ಅನಿಸುತ್ತದೆ, ರಿಲ್ಯಾಕ್ಸಾಗಿರುತ್ತೇನೆ ಮತ್ತು ಸಂತೋಷದಿಂದಿರುತ್ತೇನೆ. ನನಗೆ ಸುಸ್ತಾದಾಗಲೆಲ್ಲ ಅಥವಾ ಗೊಂದಲವಾದಾಗಲೆಲ್ಲ, ಬೆಳಕನ್ನು ಸಂಪರ್ಕಿಸುತ್ತೇನೆ. ಅನಂತರ ಫ್ರೆಷ್ ಆಗುತ್ತೇನೆ ಮತ್ತು ಯಾವುದೋ ಶಕ್ತಿ ನನ್ನೊಳಗೆ ಬಂದಂತೆ ಆಗುತ್ತದೆ.

**–ಸುಗುಣ ಪಿ., 12ನೇ ತರಗತಿ, ಎಸ್.ಬಿ.ಎಸ್ ಮೂಥ ಗರ್ಲ್ಸ್ ಸೀನಿಯರ್ ಸೆಕಂಡರಿ ಸ್ಕೂಲ್, ವೆಸ್ಟ್ ಮಾಂಬಲಮ್, ಚೆನ್ನೈ**

ಲೈಟ್ ಚಾನೆಲಿಂಗ್ ಅಭ್ಯಾಸ ಮಾಡುವುದರಿಂದ ನನ್ನ ಕೋಪವು ಕಡಿಮೆಯಾಗಿದೆ ಮತ್ತು ನನ್ನ ಏಕಾಗ್ರತೆಯ ಶಕ್ತಿಯೂ ಹೆಚ್ಚಾಗಿದೆ. ನಾನು ಎಂದಿಗೂ ಒಂದು ಜಾಗದಲ್ಲಿ ಮೌನವಾಗಿ ಕುಳಿತುಕೊಳ್ಳುತ್ತಿರಲಿಲ್ಲ ಆದರೆ ಈಗ ಕುಳಿತುಕೊಳ್ಳಬಲ್ಲೆ. ಹಾಗೂ, ಬೆಳಕು ನನ್ನ ಹತ್ತಿರದ ಗೆಳೆಯನಾಗಿದೆ. ನನಗೆ ಯಾವಾಗ ಬೇಕೊ ಆಗ ಮತ್ತು ನಾನು ತೊಂದರೆಯಲ್ಲಿ ಇದ್ದಾಗ, ಬೆಳಕನ್ನು ಕರೆಯುತ್ತೇನೆ. ನಾನು ಬೆಳಕಿನಿಂದ ಚೈತನ್ಯಗಳನ್ನು ಪಡೆಯುತ್ತೇನೆ ಮತ್ತು ಅದು ನನ್ನನ್ನು ದಿನ ಪೂರ್ತಿ ಫ್ರೆಷ್ ಆಗಿರಲು ಸಹಾಯ ಮಾಡುತ್ತದೆ. ನನ್ನ ಎಲ್ಲ ಆಲೋಚನೆಗಳನ್ನು ಬೆಳಕಿನ ಜೊತೆ ಹಂಚಿಕೊಳ್ಳುತ್ತೇನೆ ಮತ್ತು ಯಾವುದು ಸರಿ ಮತ್ತು ಯಾವುದು ಸರಿಯಲ್ಲವೆಂದು ಹೇಳುವ ಮೂಲಕ ಅದು ನನಗೆ ಪ್ರತಿಸ್ಪಂದಿಸುತ್ತದೆಂದು ಅನಿಸುತ್ತದೆ.

**––ಶಿವಪ್ರಿಯ ಪಿ., 12ನೇ ತರಗತಿ, ಎಸ್.ಬಿ.ಎಸ್ ಮೂಥ ಗರ್ಲ್ಸ್ ಸೀನಿಯರ್ ಸೆಕಂಡರಿ ಸ್ಕೂಲ್, ವೆಸ್ಟ್ ಮಾಂಬಲಮ್, ಚೆನ್ನೈ**

## ಲೈಟ್ ಚಾನಲ್ಸ್ ವಿಶ್ವ ಸಂಚಲನ

ಇದು, ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವುದಕ್ಕಾಗಿ ಆತ್ಮಪ್ರಜ್ಞೆಯಲ್ಲಿ ನಡೆಯುವ ಒಂದು ಸಂಚಲನ. ಭಾಷಣಗಳು, ಬಾವುಟಗಳಿಲ್ಲದ, ಬೆಳಕನ್ನು ಚಾನಲ್ ಮಾಡಿದರಷ್ಟೇ ಸಾಕಾಗುವ ಒಂದು ಸಂಚಲನ. ಪದಗಳು ಮಾಡಲಾಗದ ಎಲ್ಲವನ್ನೂ ಬೆಳಕೇ ಮಾಡುತ್ತದೆ.

ನಾವು ಚಾನಲ್ ಮಾಡಿ ಬೆಳಕನ್ನು ಹರಡಿದಾಗ, ಅದು ಬೇರೆಯವರ ಹೃದಯಗಳನ್ನು ಮತ್ತು ಮನೆಗಳನ್ನು ಪ್ರವೇಶಿಸುತ್ತದೆ ಮತ್ತು ಆಲೋಚನೆಗಳು ಮತ್ತು ಭಾವನೆಗಳಲ್ಲಿರುವ ಕತ್ತಲನ್ನು ಪರಿವರ್ತಿಸುತ್ತದೆ. ವ್ಯಕ್ತಿಗಳೊಂದಿಗೆ ಪ್ರಪಂಚವೂ ಪರಿವರ್ತನೆಗೊಳ್ಳುತ್ತದೆ.

ಇದು ಭೌತಿಕ ಬೆಳಕಲ್ಲ, ಆದರೆ ಇದು, ಯಾವುದರಿಂದ ಇಡೀ ಸೃಷ್ಟಿ ಬಂದಿದೆಯೋ ಆ ಅತಿ ಸೂಕ್ಷ್ಮ ಬೆಳಕು. ಈ ಬೆಳಕಿನಲ್ಲಿ ಎಲ್ಲವೂ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ, ಆದರೆ ಎಲ್ಲಾ ಕಡೆ ಇದೆ.

ನಾವು ಪ್ರತಿದಿನ ಎದ್ದಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ಚಾನಲ್ ಮಾಡಿ ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.

ಚಾನಲ್ ಮಾಡಿ ಬೆಳಕನ್ನು ಹರಡುವುದಕ್ಕಾಗಿ, ನಿಮ್ಮ ಮೇಲೆ ಬೆಳಕಿನ ಸಾಗರವೊಂದನ್ನು ಕಲ್ಪಿಸಿಕೊಳ್ಳಿ. ನಂತರ ಈ ಸಾಗರದಿಂದ ಬೆಳಕಿನ ದಪ್ಪ ಕಿರಣವೊಂದು ಕೆಳಬಂದಂತೆ ಕಲ್ಪಿಸಿಕೊಳ್ಳಿ. ಈ ಬೆಳಕು ನಿಮ್ಮನ್ನು ಪ್ರವೇಶಿಸಿ ನಿಮ್ಮ ದೇಹವನ್ನು ಸಂಪೂರ್ಣವಾಗಿ ತುಂಬುತ್ತಿದೆಯೆಂದು ಕಲ್ಪಿಸಿಕೊಳ್ಳಿ. ಒಂದು ನಿಮಿಷ ಈ ಬೆಳಕನ್ನು ಅನುಭವಿಸಿ. ನಂತರ ಈ ಬೆಳಕು ನಿಮ್ಮ ದೇಹದಿಂದ ಹೊರಬಂದು ನಿಧಾನವಾಗಿ ಸುತ್ತಲೂ ಹರಡುತ್ತಾ, ನಿಮ್ಮ ಮನೆ, ಪ್ರದೇಶ, ದೇಶ ಮತ್ತು ಇಡೀ ಪ್ರಪಂಚವನ್ನು ತುಂಬುತ್ತಿದೆ ಎಂದು ಕಲ್ಪಿಸಿಕೊಳ್ಳಿ.

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರವರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಎಲ್ಲರಿಗೂ ಹರಡಿ.

www.lightchannels.comಗೆ ಭೇಟಿ ನೀಡಿ.

## ಶಂಬಲದ ನಿಯಮಗಳು

**ಈ ಏಳು ನಿಯಮಗಳನ್ನು ಶಂಬಲದಲ್ಲಿ ವಾಸಿಸುತ್ತಿರುವ ಜನರು ಅಭ್ಯಾಸ ಮಾಡುತ್ತಾರೆ. ಅವರು ಶಾಂತಿ–ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವನದಲ್ಲಿಯೇ ಬದುಕುತ್ತಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ನಂತರ ಅವುಗಳನ್ನು ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ನಕಾರಾತ್ಮಕತೆಗಳನ್ನು ಗೆಲ್ಲಲು ದೇಹ, ಮನಸ್ಸು ಮತ್ತು ಬುದ್ಧಿಗಳನ್ನು ಸಿದ್ಧಗೊಳಿಸುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡುವುದು.

## ಗುರೂಜಿಯವರ ನುಡಿಗಳು

**ಗುರೂಜಿಯವರ ಭಾಷಣಗಳಿಂದ ಆಯ್ದ ಭಾಗಗಳು**
**ಸಂ: ಶೋಭಾ ಕೆ. ರಾವ್; ಅನು: ಸುಜಾತ ವಿ**

ಜೂನ್ 2006

ನೀವು ಈ ವಿಷಯದ ಬಗ್ಗೆ ಚಿಂತಿಸಬೇಕೆಂದು ನಾನು ಬಯಸುತ್ತೇನೆ. ಕೆಲವೊಮ್ಮೆ ಜನರು ಸಲಹೆಯನ್ನು ಕೇಳುತ್ತಾರೆ ಮತ್ತು ಸಲಹೆ ಪಡೆದ ನಂತರ ಒಬ್ಬ ಜ್ಯೋತಿಷಿಯ ಬಳಿ ಹೋಗುತ್ತಾರೆ. ಇದರಿಂದ ಯಾವ ರೀತಿಯಲ್ಲೂ ನಮ್ಮ ಮನಸ್ಸಿಗೆ ನೋವುಂಟಾಗುವುದಿಲ್ಲವೆಂದು ನಿಮಗೆ ಹೇಳಬಯಸುತ್ತೇನೆ. ಕೆಲವೊಮ್ಮೆ ನಮಗೆ ವಿನೋದವೆನಿಸುತ್ತದೆ ಮತ್ತು ಕೆಲವೊಮ್ಮೆ ದುಃಖವಾಗುತ್ತದೆ. ನನ್ನ ಗುರುವಿನೊಂದಿಗೂ ಈ ರೀತಿ ಆಗುತ್ತಿದ್ದುದನ್ನು ನಾನು ಕಂಡಿದ್ದೇನೆ.

ಒಂದು ಸಾಮಾನ್ಯ ಉದಾಹರಣೆ ಕೊಡುತ್ತೇನೆ. ಒಂದು ದಿನ ನನ್ನ ಗುರುಗಳು ಯೋಜನೆಯೊಂದರ ಬಗ್ಗೆ ಮಾತನಾಡಬೇಕೆಂದು ಹೇಳಿದರು. ಅವರು ಇನ್ನೇನು ನಮಗೆ ವಿವರಿಸಲು ಪ್ರಾರಂಭಿಸುವಾಗ, ಆ ಕಾಲದ ಹಿರಿಯ ವ್ಯಕ್ತಿಯೊಬ್ಬರು ಒಂದು ರೀತಿಯ ನಕ್ಷೆಯಂತೆ ಕಾಣುತ್ತಿದ್ದ ದೊಡ್ಡ ಕಾಗದದ ಸುರುಳಿಯನ್ನು ಹಿಡಿದಿದ್ದನ್ನು ಕಂಡೆ. ನಂತರ ನನ್ನ ಗುರುಗಳು ಮತ್ತು ಅವರು ಜೊತೆಯಾಗಿ ಚರ್ಚಿಸುತ್ತಿದ್ದುದನ್ನು ಕಂಡೆ. ಭವಿಷ್ಯದ ಯೋಜನೆಯ ನೀಲನಕ್ಷೆ ಸಿದ್ಧವಾಗುತ್ತಿದೆ ಎಂದು ನಮಗೆ ಖಚಿತವಾಗಿತ್ತು. ಆದರೆ ಆ ವ್ಯಕ್ತಿ ಕೊಠಡಿಯಿಂದ ಹೊರಬಂದಾಗ, ಅವರು ತಮ್ಮ ಮನೆಯ ನಕ್ಷೆಯನ್ನು ಚರ್ಚಿಸುವುದಕ್ಕೆ ಬಂದಿದ್ದರೆಂದು ನಮಗೆ ತಿಳಿಯಿತು! ಖಂಡಿತವಾಗಿ ನನ್ನ ಗುರುಗಳು ಆ ಯೋಜನೆಯ ಬಗ್ಗೆ ಮಾತನಾಡಿದರು. ಆದರೆ, ಯಾರೂ ಅವರನ್ನು ಗಂಭೀರವಾಗಿ ಪರಿಗಣಿಸಲಿಲ್ಲ. ಅದು ಶೋಚನೀಯವಾದ ಅಂಶ. ಸಹಜವಾಗಿಯೇ ಜನರು ನನ್ನನ್ನು ಇಲ್ಲಿ ಬಹಳ ಗಂಭೀರವಾಗಿ ಪರಿಗಣಿಸುತ್ತಾರೆ. ನನ್ನ ಗುರುಗಳು ಅಷ್ಟು ಭಾಗ್ಯಶಾಲಿಯಾಗಿರಲಿಲ್ಲ. ಅವರು ಕೇವಲ ಋಷಿಗಳ ಸಂಪರ್ಕವನ್ನಷ್ಟೇ ಹೊಂದಿರಲಿಲ್ಲ, ಅವರು ಋಷಿಗಳನ್ನು ಭೇಟಿಮಾಡುತ್ತಿದ್ದರು, ದೈವೀ ಲೋಕಗಳಿಗೆ ಹೋಗುತ್ತಿದ್ದರು, ದೈವೀ ಪುರುಷರನ್ನು ಭೇಟಿಮಾಡುತ್ತಿದ್ದರು ಎಂದು ಜನರಿಗೆ ತಿಳಿದಿತ್ತು. ಜೀವನ ಪೂರ್ತಿ ಅವರು ಋಷಿಗಳ ಕೆಲಸದಲ್ಲಿ ಭಾಗವಹಿಸುತ್ತಿದ್ದರು. ಜನರಿಗೆ ಇವೆಲ್ಲಾ ಗೊತ್ತಿತ್ತು. ಆದರೂ ಜನರು ಅವರನ್ನು, ಆಧ್ಯಾತ್ಮಿಕ ವಿಷಯಗಳಲ್ಲಿ ಉತ್ತಮರಾದ ಆದರೆ ಲೌಕಿಕ ವಿಷಯಗಳಲ್ಲಿ ಉತ್ತಮರಲ್ಲದ ವ್ಯಕ್ತಿಯೆಂದು ಕಾಣುತ್ತಿದ್ದರು. ಆದರೆ ನನ್ನ ಗುರುವಿನ ಬಳಿ ಅತ್ಯುತ್ತಮವಾದ ಪರಿಹಾರಗಳಿದ್ದವು, ಅತ್ಯುತ್ತಮವಾದ ಉತ್ತರಗಳಿದ್ದವು.

ಒಂದು ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು, ನಾವು ಕನಿಷ್ಠ ಧ್ಯಾನವನ್ನಾದರೂ ಮಾಡಬೇಕು ಮತ್ತು ಸಕಾರಾತ್ಮಕರಾಗಬೇಕು. ಕೆಲವೊಮ್ಮೆ ಇವುಗಳು ಕೂಡ ಸಾಕಾಗುವುದಿಲ್ಲ. ಕೆಲವೊಮ್ಮೆ ಧ್ಯಾನ ನಮ್ಮ ಸಮಸ್ಯೆಗಳನ್ನು ಬಗೆಹರಿಸುವುದಿಲ್ಲ. ಸಕಾರಾತ್ಮಕವಾಗಿದ್ದರೂ ಕೂಡ, ನಿಯಮಗಳನ್ನು ಪಾಲಿಸಿದರೂ ಕೂಡ, ಕೆಲವೊಮ್ಮೆ ನಮಗೆ ಕೆಲವು ಸಮಸ್ಯೆಗಳು ಕಾಡುತ್ತಿರುತ್ತವೆ. ಅಂತಹ ಸಮಯಗಳಲ್ಲಿ ನಾವು ದೇವರ ಅನುಗ್ರಹವನ್ನು ಕೋರಬೇಕು. ಇದಕ್ಕೆ ಯಾವುದೇ ತಂತ್ರವಿಲ್ಲ. ಸುಮ್ಮನೆ ಪ್ರಾರ್ಥನೆ ಮಾಡಬೇಕು. ನಂಬಬೇಕು, ವಿಶ್ವಾಸದಿಂದಿರಬೇಕು ಮತ್ತು ತಾಳ್ಮೆಯಿಂದ ಇರಬೇಕು. ನಂತರ, ನಾನೇ ನೋಡಿರುವ ಹಾಗೆ, ಪವಾಡಗಳು ಸಂಭವಿಸುತ್ತವೆ. ಪವಾಡಗಳು ಸಾಧ್ಯವಾಗುತ್ತವೆ. ಅವು ಸಂಭವಿಸುತ್ತವೆ. ಈ ಪವಾಡಗಳು ನಮ್ಮಲ್ಲಿ ಅನೇಕರಿಗೆ ಸಂಭವಿಸಿವೆ. ಪ್ರತಿಯೊಬ್ಬರಿಗೂ ಪವಾಡಗಳು ಉಂಟಾಗಬಹುದು, ಕೆಲವು ಜನರಿಗೆ ಮಾತ್ರವಷ್ಟೇ ಅದು ಸೀಮಿತವಾಗಿಲ್ಲ. ಇದಕ್ಕಾಗಿ ನಾವು ಆಧ್ಯಾತ್ಮಿಕ ವಿಧಾನವನ್ನು ಅನುಸರಿಸಬೇಕು. ನಾವು ಧ್ಯಾನಮಾಡಬೇಕು, ಸಕಾರಾತ್ಮಕರಾಗಬೇಕು ಮತ್ತು ಅನುಗ್ರಹಕ್ಕಾಗಿ ಪ್ರಯತ್ನಿಸಬೇಕು ಮತ್ತು ಕಾಯಬೇಕು, ಇದು ಯಾರಿಗಾದರೂ ಸಿಗಬಹುದು ಹಾಗು ನಮ್ಮೆಲ್ಲರಿಗೂ ಸಿಗಬಹುದು. ಜನರಿಗೆ ಲಾಭವಾಗುತ್ತದೆ. ನಾನು 1988ರಿಂದ ಧ್ಯಾನವನ್ನು ಕಲಿಸುತ್ತಿದ್ದೇನೆ. ನಾನು ಅಂದಿನಿಂದ ನೋಡುತ್ತಿದ್ದೇನೆ. ಅದೇನೆಂದರೆ, ಪ್ರಯೋಜನ ಪಡೆದ ನಂತರ, ಜೀವನವು ಸುಗಮವಾದನಂತರ, ಎಲ್ಲವೂ ಚೆನ್ನಾಗಿ ಇರುವಾಗ, ದುಃಖದ ಸಂಗತಿಯೆಂದರೆ ನಾವು ಧ್ಯಾನ ಮಾಡುವುದನ್ನು ನಿಲ್ಲಿಸುತ್ತೇವೆ. ನಾವು ಬಹಳ ಎಚ್ಚರಿಕೆಯಿಂದ ಇರಬೇಕಾದುದು ಅಲ್ಲೇ. ಧ್ಯಾನ ಉಸಿರಾಟವಿದ್ದಂತೆ. ಅದನ್ನು ನಾವು ಯಾವ ಹಂತದಲ್ಲೂ ನಿಲ್ಲಿಸಬಾರದು. ನಾವು ನಿಲ್ಲಿಸಿದರೆ ಮತ್ತೆ ನಾವು ಅದೇ ಚೌಕಕ್ಕೆ ಹಿಂದಿರುಗುತ್ತೇವೆ, ಆರಂಭದಲ್ಲಿದ್ದ ಹಾಗೆ ಚೌಕ Aಗೆ ಹಿಂದಿರುಗಿ ಹೋಗುತ್ತೇವೆ. ಅದೇ ಸಮಸ್ಯೆಗಳು ಬರದಿರಬಹುದು ಆದರೆ ನಮಗೆ ಹೊಸ ಸಮಸ್ಯೆಗಳು ಬರುತ್ತವೆ. ಈ ಪ್ರಪಂಚದಲ್ಲಿ ಬಹಳ ಸಮಸ್ಯೆಗಳಿವೆ; ಕೆಲವು ನಮಗೆ ಬರುತ್ತವೆ.

ನಂತರ ಜನರು ತಕ್ಷಣವೇ ಧ್ಯಾನವನ್ನು ಮತ್ತು ಗುರೂಜಿಯವರನ್ನು ನೆನಪುಮಾಡಿಕೊಂಡು ಮರಳಿ ಬರುವುದನ್ನು ನಾನು ನೋಡಿದ್ದೇನೆ! ವಾಸ್ತವವಾಗಿ ಅವರನ್ನು ಸ್ವಾಗತಿಸಲಾಗುತ್ತದೆ, ಏನೇ ಕಾರಣವಿರಲಿ. ವಿಷಯವೇನೆಂದರೆ, ಅವರು ಧ್ಯಾನಕ್ಕೆ ಮರಳಿದರೆಂಬ ಕಾರಣಕ್ಕಾಗಿ, ಮರು ಕ್ಷಣದಲ್ಲಿಯೇ ಪವಾಡಗಳು ಸಂಭವಿಸುವುದಿಲ್ಲ. ನಾವು ಮತ್ತೆ ಆರಂಭಿಸಬೇಕು, ಕೆಲಸಮಾಡಬೇಕು, ಧ್ಯಾನ ಮಾಡಬೇಕು ಮತ್ತು ಕಾಯಬೇಕು. ಆದುದರಿಂದ ನಾವು ಅಪಾಯಕ್ಕೆ ಗುರಿಯಾಗದಂತೆ ನೋಡಿಕೊಳ್ಳಬೇಕು, ಕೊನೆಯವರೆಗೂ ಧ್ಯಾನವನ್ನು ಬಿಡದೇ ಮಾಡಬೇಕು.

ವ್ಯಕ್ತಿಯೊಬ್ಬರಿಗೆ ಎರಡು ಅದ್ಭುತವಾದ ಅನುಭವಗಳಾದವು. ಒಂದು, ಇಂಡೋನೇಷಿಯದ ಬಗ್ಗೆ. ಅಲ್ಲಿ ಭೂಕಂಪವಿತ್ತು. ಈ ವ್ಯಕ್ತಿ ಇಂಡೋನೇಷಿಯ ಕುಸಿದು ಬೀಳುವುದನ್ನು ನೋಡಿದ್ದರು. ಈಗ ಈ ವ್ಯಕ್ತಿಯು ದಕ್ಷಿಣ ಭಾರತದಲ್ಲಿ ಹೆಚ್ಚು ವಿನಾಶಗಳು ಸಂಭವಿಸಿದ್ದನ್ನು ನೋಡಿದರು. ದಯವಿಟ್ಟು ಭಯ ಪಡಬೇಡಿ. ಈ ವಿನಾಶವು ದಕ್ಷಿಣದಿಂದ ಪ್ರಾರಂಭವಾಗಿ ಬೆಂಗಳೂರಿಗೆ ಬಂದಾಗ ಅದು ನಿಂತುಹೋಯಿತು. ಆದುದರಿಂದ ನೀವು ನೆಮ್ಮದಿಯಾಗಿರಬಹುದು. ಇವುಗಳನ್ನು ಮುಂದೆ ಆಗುವ ಘಟನೆಗಳಂತೆ ಅವರು ನೋಡಿದರು.

ಒಂದು ಬಾರಿ ವ್ಯಕ್ತಿಯೊಬ್ಬರು ತಮ್ಮ ಒಂದು ಅನುಭವವನ್ನು ಅಮರರವರಿಗೆ ವರ್ಣಿಸಿದರು. ಅವರು ಹೇಳಿದರು, "ಮಲ್ಲೇಶ್ವರಂ ಮಾರುಕಟ್ಟೆಯಲ್ಲಿ, ಗುಂಡು ಹಾರಿಸುವುದು ಇತ್ಯಾದಿ ಅನೇಕ ತೊಂದರೆಗಳು ಸಂಭವಿಸುತ್ತವೆ." ಭಯೋತ್ಪಾದಕರ ಗುಂಪೊಂದು ದಾಳಿ ಮಾಡುತ್ತಿದ್ದುದನ್ನು ಅವರು ನೋಡಿದರು. ಇದರ ವಿವರಣೆ ನೀಡಿದ್ದು 77ರಲ್ಲಿ. ಅಮರರವರು ಹೇಳಿದರು, "ಇದು ಭವಿಷ್ಯದ ಒಂದು ಘಟನೆ." ಇದು ಇನ್ನೂ ಸಂಭವಿಸಿಲ್ಲ. ಜನರು ಮುಂದಿನ ಈ ಘಟನೆಗಳನ್ನು ನೋಡಲು ಶಕ್ತರಾಗಿದ್ದಾರೆ.

ಆ ವ್ಯಕ್ತಿ ತನ್ನ ಅನುಭವದಲ್ಲಿ ನೋಡಿದ್ದು ಸಂಭವಿಸದೇ ಇರಬಹುದು, ಎಂದು ನಾನು ಹೇಳಬಯಸುತ್ತೇನೆ. ಏಕೆಂದರೆ ಮನುಷ್ಯರಾದ ನಾವು, ಧ್ಯಾನಿಗಳಾದ ನಾವು, ಬದಲಾವಣೆಗಳನ್ನು ತರಬಹುದು. ನಮ್ಮ ಧ್ಯಾನಗಳು ವಿಧಿಯನ್ನು ಬದಲಾಯಿಸುತ್ತವೆ. ನಮ್ಮ ಧ್ಯಾನಗಳು ಬಹಳಷ್ಟು ನೋವುಗಳನ್ನು ತಪ್ಪಿಸುತ್ತವೆ ಮತ್ತು ಬಹಳಷ್ಟು ವಿನಾಶಗಳನ್ನು ತಪ್ಪಿಸುತ್ತವೆ. ನಾವುಗಳಷ್ಟೇ ಧ್ಯಾನಮಾಡುತ್ತಿದ್ದೇವೆಂದು ತಿಳಿಯಬೇಡಿ. ಬಹಳಷ್ಟು ಅದ್ಭುತವಾದ ಜನರಿದ್ದಾರೆ. ಆದುದರಿಂದಲೇ 3ನೇ ವಿಶ್ವಯುದ್ಧ ಸಂಭವಿಸಲಿಲ್ಲ. ಅದು ಸಂಭವಿಸುವ ಹಾಗೆ ಕಾಣಿಸುತ್ತಿಲ್ಲ, ಆದರೆ ನಮಗೆ ಗೊತ್ತಿಲ್ಲ.

ನಾನು ಪ್ರಳಯ ಪ್ರಕ್ರಿಯೆಗಳ ಬಗ್ಗೆ ಮಾತನಾಡುತ್ತಿದ್ದೆ ಮತ್ತು ನೂತನ ಚಳುವಳಿಗಳಿರುತ್ತವೆಂದು ಹೇಳಿದ್ದೆ. ಜನರು ತಮ್ಮ ಪ್ರತಿಭಟನೆಯನ್ನು ವ್ಯಕ್ತಪಡಿಸುವುದರ ಬಗ್ಗೆ ನಾವು ಮಾತನಾಡುತ್ತಿದ್ದುದು ನನಗೆ ನೆನಪಿದೆ. ಇಂತಹ ಸಾರ್ವಜನಿಕ ಪ್ರತಿಭಟನೆಗಳು ಪ್ರಳಯದ ಒಂದು ಭಾಗ. ಭವಿಷ್ಯದಲ್ಲಿ ಅನೇಕ ಸಾರ್ವಜನಿಕ ಪ್ರತಿಭಟನೆಗಳು ನಡೆಯುತ್ತವೆ.

ನಾನು ಯಾವಾಗಲೂ ಹೇಳುತ್ತೇನೆ, "ನಿಮ್ಮ ಅನುಭವಗಳನ್ನು ಹೆಚ್ಚು ಜನರೊಂದಿಗೆ ಚರ್ಚಿಸಬೇಡಿ." ನೀವು ನನಗೆ ಹೇಳಬೇಕು. ಬಹುಶಃ ನೀವು ನಿಮ್ಮ ಹತ್ತಿರದ ಗೆಳೆಯರೊಂದಿಗೆ, ಕುಟುಂಬದ–ಗೆಳೆಯರೊಂದಿಗೆ ಹೇಳಬಹುದು. ಆದರೆ ನೀವು ಈ ಅನುಭವಗಳ ಬಗ್ಗೆ ಯಾವಾಗಲೂ ಮಾತನಾಡುತ್ತಾ ಇರಬಾರದು. ನಾನು ಇದಕ್ಕಿಂತ ಹೆಚ್ಚು ವಿವರಿಸಲಾರೆ. ಒಮ್ಮೆ ನನಗೆ ನೆನಪಿದೆ, ಒಬ್ಬ ವ್ಯಕ್ತಿ ತನ್ನ ಅನುಭವಗಳನ್ನು ವರ್ಣಿಸಿದರು ಮತ್ತು ಅದೇ ಅವರ ಕೊನೆಯ ಅನುಭವವಾಯಿತು. ಬಳಿಕ ಅವರಿಗೆ ಯಾವುದೇ ಅನುಭವಗಳಾಗಲಿಲ್ಲ. ಇದು 1989ನಲ್ಲಿ ನಡೆದಿತ್ತು. ನಂತರ ಅವರು ನನ್ನ ಬಳಿ ಬರುತ್ತಿದ್ದರು ಹಾಗೂ ಒಂದು ರೀತಿಯಲ್ಲಿ ಅಳುತ್ತಿದ್ದರು, "ಏನಾಯಿತು? ನನಗೆ ಯಾಕೆ ಅನುಭವಗಳಾಗುತ್ತಿಲ್ಲ?" ನಮಗೆ ಗೊತ್ತಿಲ್ಲ. ಈ ಅತೀಂದ್ರಿಯ ಉಡುಗೊರೆಗಳು ಕೆಲವೊಮ್ಮೆ ಅನನ್ಯವಾಗಿರುತ್ತವೆ. ಅವು ಉಡುಗೊರೆಗಳು. ನಾವು ಈ ವಿಷಯಗಳ ಬಗ್ಗೆ ಎಚ್ಚರದಿಂದಿರಬೇಕು. ಇದರ ಬಗ್ಗೆ ಮಾತನಾಡಲೇಬಾರದು ಮತ್ತು ಅದರ ಪ್ರದರ್ಶನ ಮಾಡಬಾರದು. ■

## ಶ್ರೀ ಜಯಂತ್ ದೇಶ್‌ಪಾಂಡೆಯವರ ಭಾಷಣದ ಆಯ್ದ ಭಾಗಗಳು

ಸಂ: ಶೋಭಾ ಕೆ. ರಾವ್; ಅನು: ಕಾಂಚನಲತಾ

13–09–2020

ಒಂದು ವ್ಯಕ್ತಿ ಉನ್ನತ ಶರೀರದ ಬಗ್ಗೆ ವಿಚಾರಿಸಿದ್ದರು. ಹಾಗೂ ನಾನು ಅವರಿಗೆ ಇದರ ಬಗ್ಗೆ ಮಾಹಿತಿ ಕಲೆ ಹಾಕಿ, ಮುಂದಿನ ತರಗತಿಯಲ್ಲಿ ವಿವರಿಸುತ್ತೇನೆ ಎಂದು ಭರವಸೆ ನೀಡಿದ್ದೆ. ಅದರಂತೆಯೇ, ಗುರೂಜಿಯವರು ಉನ್ನತ ಶರೀರದ ಬಗ್ಗೆ ಹೇಳಿದ್ದ ಮಾತುಗಳಿಂದ ಕೆಲವು ಟಿಪ್ಪಣಿಗಳನ್ನು ತಯಾರಿಸಿದ್ದೇನೆ. ಅದು ಬಹಳ ಕುತೂಹಲಕಾರಿಯಾಗಿದೆ.

ನಾವು ಈ ಲೋಕದಲ್ಲೂ ಹಾಗೂ ಉನ್ನತ ಲೋಕದಲ್ಲೂ ಏಕಕಾಲದಲ್ಲಿ ಇರುತ್ತೇವೆ ಎಂದು ಗುರೂಜಿಯವರು ಹೇಳಿದ್ದರು. ಉನ್ನತ ಲೋಕದಲ್ಲಿನ ನಮ್ಮ ಅಸ್ತಿತ್ವ ಉನ್ನತ ಶರೀರದ್ದಾಗಿರುತ್ತದೆ. ಮಹರ್ಷಿ ಅಮರರವರಂಥ ಮಾಸ್ಟರ್‌ಗಳು ಸಪ್ತ ಲೋಕಗಳಲ್ಲೂ ಏಕಕಾಲದಲ್ಲಿ ಇರುತ್ತಾರೆ ಎಂದು ಗುರೂಜಿ ಹೇಳಿದ್ದರು. ಹಾಗಾಗಿ, ಅವರುಗಳಿಗೆ ಇಲ್ಲಿ ಭೌತಿಕ ಶರೀರವಿರುತ್ತದೆ ಮತ್ತು ಇನ್ನೂ ಆರು ಶರೀರಗಳು ಪ್ರತಿಯೊಂದು ಲೋಕದಲ್ಲಿ ಇರುತ್ತವೆ. ಪ್ರತಿಯೊಂದು ಲೋಕದಲ್ಲಿ ಇರುವ ಈ ಶರೀರಗಳು ಋಷಿಗಳ ಉನ್ನತ ಶರೀರಗಳಾಗಿರುತ್ತವೆ. ಉದಾಹರಣೆಗೆ, ಸತ್ಯ ಲೋಕದಲ್ಲಿರುವ ಗುರೂಜಿಯವರ ಹೆಸರು ಮಹರ್ಷಿ ಅಲೋಕ ಎಂಬುದು ನಮಗೆ ತಿಳಿದಿದೆ. ಅವರು ಮಹರ್ಷಿ ಅಲೋಕರಾಗಿ ಸತ್ಯ ಲೋಕದ ಗುಹೆಯೊಂದರಲ್ಲಿ ಕುಳಿತು ತಪಸ್ಸು ಮಾಡುತ್ತಿರುವುದಾಗಿ, ಅವರ ಬೆಳಕಿಗೆ ಬಾಗಿಲುಗಳು ಪುಸ್ತಕದಲ್ಲಿ ಉಲ್ಲೇಖಿಸಿದ್ದಾರೆ. ಹಾಗಾಗಿ, ಮಹರ್ಷಿ ಅಲೋಕ ಅವರು ಗುರೂಜಿಯವರ ಉನ್ನತ ಶರೀರ.

ಉನ್ನತ ಶರೀರದ ಬಗ್ಗೆ ಗುರೂಜಿಯವರ ತರಗತಿಗಳೊಂದರಲ್ಲಿ ಬಹಳ ಸುಂದರವಾಗಿ ವಿವರಿಸಲಾಗಿದೆ. ನಾವು ಸಾಧನೆಯಲ್ಲಿ ಮುನ್ನಡೆ ಸಾಧಿಸುತ್ತಾ ಹೋದಂತೆ ನಮ್ಮ ಆವರ್ತನಗಳು (frequencies) ಹೆಚ್ಚು ಹೆಚ್ಚು ಸೂಕ್ಷ್ಮವಾಗತೊಡಗುತ್ತವೆ. ನಾವು ದೇಹವನ್ನು ತ್ಯಜಿಸಿದಾಗ, ಈ ಸೂಕ್ಷ್ಮ ಆವರ್ತನಗಳೊಂದಿಗೆ ನಮ್ಮ ಸೂಕ್ಷ್ಮ ಶರೀರದಲ್ಲಿ ಜೀವಿಸುವುದನ್ನು ಮುಂದುವರೆಸುತ್ತೇವೆ. ನಾವು ಮತ್ತೊಮ್ಮೆ ಜನಿಸಿ ಬಂದಾಗ, ಈ ಸೂಕ್ಷ್ಮ ಶರೀರದಲ್ಲಿ, ಪ್ರತ್ಯೇಕವಾದ ಅಸ್ತಿತ್ವದಲ್ಲಿ ಮುಂದುವರೆಯುತ್ತೇವೆ. ನಾನು ಈ ರೀತಿ ಅರ್ಥ ಮಾಡಿಕೊಂಡಿದ್ದೇನೆ. ನಾನು ತಪ್ಪಾಗಿರಲೂಬಹುದು ಆದರೆ ಕೇವಲ ತರ್ಕವನ್ನು ಬಳಸಿ ಇದನ್ನು ಹೇಳುತ್ತಿದ್ದೇನೆ. ಈ ಸೂಕ್ಷ್ಮ ಶರೀರ, ಒಂದು ರೀತಿಯಲ್ಲಿ ನಮ್ಮ ಸಾಧನೆಗೆ ದೊರೆತಿರುವ ಉಡುಗೊರೆ, ಇನ್ನೊಂದು ಲೋಕದಲ್ಲಿ ಇರುತ್ತದೆ ಮತ್ತು ಇಲ್ಲಿರುವ ಈ ಭೌತಿಕ ಶರೀರದಲ್ಲಷ್ಟೇ ಅಲ್ಲದೆ ಅಲ್ಲಿಯೂ ಅಸ್ತಿತ್ವದಲ್ಲಿ ಮುಂದುವರೆಯುತ್ತದೆ. ನಾವು ನಮ್ಮ ಸಾಧನೆಯಲ್ಲಿ ಮುನ್ನಡೆ ಸಾಧಿಸಿದಂತೆ, ಇನ್ನೂ ಹೆಚ್ಚು ಸೂಕ್ಷ್ಮ ಕಂಪನಗಳಿರುವ ಇನ್ನೊಂದು ಶರೀರವು ಇರುತ್ತದೆ. ಈ ರೀತಿಯಲ್ಲಿ ನಾವು ನಮ್ಮ ಸಾಧನೆಯಲ್ಲಿ ಪ್ರಗತಿ ಪಡೆಯುತ್ತಾ ಹೋದರೆ, ನಮಗೆ ಹೆಚ್ಚು ಶರೀರಗಳು, ಇಲ್ಲಿರುವ ಶರೀರವೂ ಸೇರಿದಂತೆ ಗರಿಷ್ಠ ಏಳು ಶರೀರಗಳು, ಉಡುಗೊರೆಯಾಗಿ ದೊರೆಯುತ್ತವೆ. ಮತ್ತು ನಾವು ಈ ಎಲ್ಲಾ ಶರೀರಗಳಲ್ಲೂ ಜೀವಿಸುವುದನ್ನು ಮುಂದುವರೆಸುತ್ತೇವೆ.

ಇದು ಬಹಳ ಅಸಾಮಾನ್ಯ ಹಾಗೂ ಅದ್ಭುತವಾದ ಮಾಹಿತಿ. ನಮ್ಮ ಭೌತಿಕ ಶರೀರವು ಸಾವನ್ನಪ್ಪಿದಾಗ, ಈ ಆರೂ ಶರೀರಗಳಲ್ಲಿ ಉನ್ನತ ಲೋಕಗಳಲ್ಲಿ ನಾವು ಜೀವಿಸುವುದನ್ನು ಮುಂದುವರೆಸುತ್ತೇವೆ. ನಮಗೆ ಮುಕ್ತಿ ದೊರೆತ ನಂತರವಷ್ಟೇ ನಮ್ಮ ಭೌತಿಕ ಶರೀರ ಮತ್ತು ಇತರ ಆರು ಶರೀರಗಳನ್ನು ಹಿಂತೆಗೆದುಕೊಳ್ಳಲಾಗುತ್ತದೆ ಮತ್ತು ನಾವು ಒಂದು ಆತ್ಮವಾಗಿ ಭಗವಂತನ ಬಳಿ ಹಿಂತಿರುಗುತ್ತೇವೆ.

ನಾವು ಈ ಪ್ರಪಂಚದಲ್ಲಿ ಬದುಕುತ್ತಿರುವಾಗ ನಮ್ಮ ಉನ್ನತ ಶರೀರವೊಂದು ಜ್ಞಾನ ಮತ್ತು ಶಕ್ತಿಗಳನ್ನು ಒಟ್ಟುಗೂಡಿಸುವುದರಲ್ಲಿ ಸಕ್ರಿಯವಾಗಿರುತ್ತದೆ ಎಂದು ಗುರೂಜಿಯವರು ವಿವರಣೆಯನ್ನು ಮುಂದುವರೆಸುತ್ತಾ ಹೇಳಿದ್ದರು. ಮತ್ತು, ನಮಗೆ ಏಳನೇ ಶರೀರವಿದ್ದು, ಅದು ಸತ್ಯ ಲೋಕದಲ್ಲಿ ಇದ್ದರೆ, ಎಷ್ಟೊಂದು ಶಕ್ತಿ ಮತ್ತು ಜ್ಞಾನವನ್ನು ಅದು ಹೊಂದಿರಬಹುದು ಎಂದು ಊಹಿಸಿಕೊಳ್ಳಿ!

ಒಂದು ಪ್ರಶ್ನೆ ಉದ್ಭವಿಸುತ್ತದೆ – ನಾವು ನಮ್ಮ ಉನ್ನತ ಶರೀರವನ್ನು ಸಂಪರ್ಕಿಸಲು ಸಾಧ್ಯವೇ? ನಾವೆಲ್ಲರೂ ಎಲ್ಲ ಲೋಕಗಳಲ್ಲೂ ಅಸ್ತಿತ್ವದಲ್ಲಿದ್ದೇವೆ ಎಂದು ಗುರೂಜಿಯವರು ಒಮ್ಮೆ ತರಗತಿಯೊಂದರಲ್ಲಿ ಉಲ್ಲೇಖಿಸಿದ್ದರು. ಆದರೆ ಈಗ ಸದ್ಯಕ್ಕೆ ಈ ಅಂಶವನ್ನು ಪಕ್ಕಕ್ಕೆ ಇಡೋಣ. ನಮಗೆಲ್ಲರಿಗೂ ಏಳು ಶರೀರಗಳು ಇವೆಯೋ ಇಲ್ಲವೋ ನಮಗೆ ತಿಳಿದಿಲ್ಲ, ಏಕೆಂದರೆ, ನಾವು ಬೆಳೆಯಬೇಕು, ಋಷಿಗಳಂತೆ ಬೆಳೆಯಬೇಕು, ಆಗ ನಮಗೆ ಅಷ್ಟೊಂದು ಶರೀರಗಳು ಉಡುಗೊರೆಯಾಗಿ ದೊರೆಯಬಲ್ಲವು ಎಂದು ಗುರೂಜಿಯವರು ಹೇಳಿದ್ದರು. ಹಾಗಾಗಿ, ನಾನು ತರ್ಕವನ್ನು ಬಳಸಿ, ನಮಗೆ ಆರು ಉನ್ನತ ಶರೀರಗಳು ಇವೆಯೋ ಇಲ್ಲವೋ ಗೊತ್ತಿಲ್ಲ ಎಂದು ಹೇಳುತ್ತಿದ್ದೇನೆ. ನಾವು ಎಷ್ಟರ ಮಟ್ಟಿಗೆ ಬೆಳೆದಿದ್ದೇವೆ ಎನ್ನುವುದನ್ನು ಅದು ಅವಲಂಬಿಸಿದೆ. ಆದರೆ, ನಮಗೆ ಇದೆ ಎಂದು ಭಾವಿಸಿಕೊಂಡರೆ, ನಮ್ಮ ಉನ್ನತ ಶರೀರವನ್ನು ಸಂಪರ್ಕಿಸಬಹುದೆ? ನಮ್ಮ ಉನ್ನತ ಶರೀರದಿಂದ ಶಕ್ತಿಗಳನ್ನು ಸೆಳೆದುಕೊಳ್ಳಬಹುದೆ? ಅದು ಸಾಧ್ಯ ಎಂದು ಗುರೂಜಿಯವರು ಹೇಳಿದ್ದರು. ಆದರೆ ಅದಕ್ಕೆ ನಾವು ಋಷಿಗಳಿಂದ ಅನುಮತಿ ಪಡೆದುಕೊಳ್ಳಬೇಕು. ಅದಕ್ಕೊಂದು ಉನ್ನತವಾದ ಉದ್ದೇಶವಿರಬೇಕು, ಅದು ಒಂದು ಸಾರ್ವತ್ರಿಕ ಕಾರಣಕ್ಕಾಗಿರಬೇಕು ಎಂದು ಅವರು ಹೇಳಿದ್ದರು. ಅದಕ್ಕಾಗಿ ನಾವು ಶಕ್ತಿಗಳನ್ನು ಹಾಗೂ ಜ್ಞಾನವನ್ನು ನಮ್ಮ ಉನ್ನತ ಶರೀರದಿಂದ ಸೆಳೆದುಕೊಳ್ಳಬಹುದು. ಆದರೆ ನಾವು ಅನುಮತಿ ಪಡೆದುಕೊಳ್ಳಬೇಕು. ಕೆಲವೊಮ್ಮೆ ನಾವು ಉನ್ನತ ಮಟ್ಟದ ಆಧ್ಯಾತ್ಮಿಕ ಗುರಿಯನ್ನು ಆರಿಸಿಕೊಂಡಿರುತ್ತೇವೆ ಮತ್ತು ಅದಕ್ಕಾಗಿ ಕೆಲಸ ಮಾಡುವಾಗ – ನಮಗೆ ನಮ್ಮ ಕಷ್ಟಗಳಿರುತ್ತವೆ ಎಂದುಕೊಳ್ಳೋಣ, ನಾವು ಇಲ್ಲಿ ಪ್ರಯಾಸ ಪಡುತ್ತಿರುತ್ತೇವೆ, ಆಗ ನಮ್ಮ ಉನ್ನತ ಶರೀರದಿಂದ ಸ್ವಯಂಚಾಲಿತವಾಗಿ, ಶಕ್ತಿಗಳು, ಸಾಮರ್ಥ್ಯ ಮತ್ತು ಜ್ಞಾನವು ನಮಗೆ ಬರುತ್ತವೆ ಎಂದು ಅವರು ಹೇಳಿದ್ದರು. ಗುರೂಜಿಯವರು ಸ್ವಯಂ ತಾವೇ ಅದನ್ನು ತಮ್ಮ ಜೀವನದಲ್ಲಿ ಅನುಭವಿಸಿದ್ದರು ಎಂದು ತರಗತಿಗಳಲ್ಲಿ ಹೇಳಿದ್ದರು. ಮೂರು ಸಂದರ್ಭಗಳಲ್ಲಿ ಅವರು ತಮ್ಮ ಉನ್ನತ ಶರೀರದಿಂದ ಶಕ್ತಿಗಳನ್ನು ಪಡೆದುಕೊಂಡಿದ್ದರು ಎಂದು ಅವರು ಹೇಳಿದ್ದರೆನಿಸುತ್ತದೆ. ಇನ್ನೊಂದು ಬಹಳ ಆಸಕ್ತಿದಾಯಕ ವಿಚಾರವೆಂದರೆ – ನೀವೆಷ್ಟು ಮಂದಿ ಅಂದಿನ ತರಗತಿಯಲ್ಲಿ ಇದ್ದಿರೋ ನನಗೆ ತಿಳಿದಿಲ್ಲ– ಇಲ್ಲಿ ತರಗತಿಯಲ್ಲಿ ಹೇಳಿದ್ದರು: "ನನಗೆ ಬಹಳ ಪರಿಚಯವಿರುವಂತೆ ಕಾಣುವ ಒಬ್ಬ ವ್ಯಕ್ತಿ ನನ್ನ ಪಕ್ಕದಲ್ಲಿ ಕುಳಿತಿದ್ದಾರೆ" ಎಂದು. ಮತ್ತು ಆ ವ್ಯಕ್ತಿಯು ಸತ್ಯ ಲೋಕದ ಮಹರ್ಷಿ ಅಲೋಕ ಎಂದು ಖಚಿತಪಡಿಸಿದ್ದರು. ಅವರು ಇಲ್ಲಿನ ತರಗತಿಯಲ್ಲಿ ಇದ್ದರು. ಹಾಗಾಗಿ, ಇವೆಲ್ಲಾ ಅದ್ಭುತವಾದ ಸಾಧ್ಯತೆಗಳು.

ಉನ್ನತ ಶರೀರದ ಇನ್ನೊಂದು ಆಕರ್ಷಕ ಅಂಶವೊಂದು ಹೀಗಿದೆ. ನಾವು ಧ್ಯಾನ ಮಾಡುತ್ತಾ ಹೋದಂತೆಲ್ಲಾ ಶಕ್ತಿಗಳನ್ನು ಸಂಗ್ರಹಿಸುತ್ತಾ ಹೋಗುತ್ತೇವೆ. ನಮ್ಮ ವ್ಯವಸ್ಥೆಯು ಈ ಶಕ್ತಿಗಳನ್ನು ಹೊಂದಿರುತ್ತದೆ. ನಾವು ಇನ್ನೂ ಹೆಚ್ಚು ಧ್ಯಾನ ಮಾಡಿದರೆ, ಬಹಳಷ್ಟು ಶಕ್ತಿಯನ್ನು ಸಂಗ್ರಹಿಸಿದರೆ, ಈ ಶಕ್ತಿಗಳು ಸಹಜವಾಗಿ ನಮ್ಮ ವ್ಯವಸ್ಥೆಯಲ್ಲಿ ಶೇಖರಣೆಯಾಗಿರುತ್ತವೆ ಮತ್ತು ಹೆಚ್ಚುವರಿ ಶಕ್ತಿಯು ನಮ್ಮ ಉನ್ನತ ಶರೀರದಲ್ಲಿ ಶೇಖರಣೆಯಾಗಿರುತ್ತವೆ. "ನೀವು ನಿಮ್ಮ ಶಕ್ತಿಗಳನ್ನು ಎಲ್ಲಿ ಶೇಖರಿಸುತ್ತೀರಿ?" ಎಂದು ಒಬ್ಬರು ಅವರನ್ನು ಕೇಳಿದಾಗ, "ನನ್ನ ವ್ಯವಸ್ಥೆಯಲ್ಲಿ, ನನ್ನ ಆನಂದಮಯ ಕೋಶದಲ್ಲಿ ಮತ್ತು ನನ್ನ ಉನ್ನತ ಶರೀರದಲ್ಲಿಯೂ ಕೂಡಾ." ಎಂದು ಗುರೂಜಿ ಹೇಳಿದ್ದರು.

ನಾವು ನಮ್ಮ ಉನ್ನತ ಶರೀರವನ್ನು, ಕೆಳಗೆ ಬಂದು ನಮಗೆ ಸಹಾಯ ಮಾಡಲು ಕೇಳಬಹುದೆ? ನಾವು ಹಾಗೆ ಕೇಳಲು ಸಾಧ್ಯವಿಲ್ಲ. ಏಕೆಂದರೆ ಅದಕ್ಕೆ ಅನುಮತಿ ಇಲ್ಲ. ಆದರೆ ನಮ್ಮ ಉನ್ನತ ಶರೀರ ನಮ್ಮ ಬದುಕನ್ನು ಸದಾ ಪರಿವೀಕ್ಷಿಸುತ್ತಿರುತ್ತದೆ. ಹಾಗೂ, ನಾವು ಈಗಾಗಲೇ ಅರ್ಥ ಮಾಡಿಕೊಂಡಿರುವಂತೆ, ಅದು ಸ್ವಯಂಚಾಲಿತವಾಗಿರುತ್ತದೆ. ಅಗತ್ಯ ಬಂದಾಗ, ಉನ್ನತ ಶರೀರವು ಕೆಳಗೆ ಬಂದು ನಮಗೆ ಸಹಾಯ ಮಾಡುತ್ತದೆ. ಸಾಮಾನ್ಯವಾಗಿ, ನಮ್ಮಲ್ಲಿರುವ ಯಾವುದೇ ಜ್ಞಾನ, ವಿವೇಚನೆ ಮತ್ತು ಶಕ್ತಿಗಳಿಂದ ನಮ್ಮ ಜೀವನವನ್ನು ನಿಭಾಯಿಸಲು ಸಾಧ್ಯವಾಗಿರುತ್ತದೆ. ಆದರೆ, ಉನ್ನತ ಶರೀರವು ಯಾವಾಗ ನಮಗೆ ಸಹಾಯ ಒದಗಿಸಬೇಕು ಎಂಬುದನ್ನು ನಿರ್ಧರಿಸುತ್ತದೆ. ಅವಶ್ಯವಾದಾಗ, ಅದು ನಮಗೆ ಸಹಾಯ ಮಾಡುತ್ತದೆ. ■

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರು – ವವರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲೀಷ್‌ನಲ್ಲಿ (ವರ್ಷಕ್ಕೆ ರೂ. 2500), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 1300) ಪಾಠಗಳನ್ನು ಕಳುಹಿಸಲಾಗುವುದು. ಭಾರತ ದೇಶದಿಂದ ಹೊರಗೆ ವಾಸವಾಗಿರುವ ವಿದ್ಯಾರ್ಥಿಗಳ ವಾರ್ಷಿಕ ರಿಜಿಸ್ಟ್ರೇಶನ್ ಫೀಯು ರೂ. 4500. ಈ ಫೀನಲ್ಲಿ ವಾರ್ತಾಪತ್ರದ ಒಂದು ವರ್ಷದ ಚಂದಾದಾರಿಕೆ ಮತ್ತು ಪಠ್ಯಪುಸ್ತಕಗಳು ಸೇರಿದೆ.

ನಂತರ, ರಿಜಿಸ್ಟ್ರೇಶನ್‌ನ ವಾರ್ಷಿಕ ನವೀಕರಣದ ಫೀ ಇಂಗ್ಲೀಷ್ (ವರ್ಷಕ್ಕೆ ರೂ. 2000), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 900). ಭಾರತ ದೇಶದಿಂದ ಹೊರಗೆ ವಾಸವಾಗಿರುವ ವಿದ್ಯಾರ್ಥಿಗಳ ರಿಜಿಸ್ಟ್ರೇಶನ್‌ನ ವಾರ್ಷಿಕ ನವೀಕರಣದ ಫೀಯು ರೂ. 3500. ಈ ಫೀನಲ್ಲಿ ವಾರ್ತಾಪತ್ರದ ಒಂದು ವರ್ಷದ ಚಂದಾದಾರಿಕೆ ಸೇರಿದೆ.

- ★ ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ–ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿ ಕೊಡಲಾಗುವುದು.
- ★ ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ★ ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ★ ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

ಚೆಕ್/ಡಿಡಿಗಳನ್ನು 'Manasa Light Age Foundation' ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.

### ಗುರೂಜಿಯವರಿಂದ ವಿಶೇಷ ಸೂಚನೆಗಳು

- ★ ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ★ ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ★ ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ★ ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ★ ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿ ಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## ಗುರೂಜಿ – ನಮ್ಮ ಲಂಗರು

**ವೈಶಾಲಿ ಜೋಶಿ; ಅನು: ಕಾಂಚನಲತಾ**

ಪ್ರಳಯ ಒಂದು ಬದಲಾವಣೆ, ಒಂದು ರೀತಿಯ ಪರಿವರ್ತನೆ ಎಂದು ಗುರೂಜಿ ಹೇಳಿದ್ದರು. ಇದು, ನಮ್ಮನ್ನು ನಾವೇ ಒಂದು ಹೊಸ ಪ್ರಜ್ಞಾವಸ್ಥೆಗೆ ಸ್ಥಳಾಂತರಗೊಳಿಸಿಕೊಳ್ಳುವುದು. 1987ರಲ್ಲಿ ಪ್ರಳಯ ಪ್ರಾರಂಭವಾಯಿತು ಎಂದು ಗುರೂಜಿ ನಮಗೆ ಹೇಳಿದ್ದರು. ಮತ್ತು ಇದು ಪ್ರತಿ ಏಳು ವರ್ಷಗಳ 7 ಹಂತಗಳನ್ನೊಳಗೊಂಡಂತೆ ಮುಂದಿನ 49 ವರ್ಷಗಳ ಕಾಲ ಮುಂದುವರೆಯುತ್ತದೆ. ನಾವು ಈಗ 2015 ರಿಂದ 2022 ರವರೆಗಿನ 5ನೇ 7–ವರ್ಷದ ಹಂತದಲ್ಲಿದ್ದೇವೆ.

ಪ್ರಳಯದ ಪ್ರಭಾವ, ವ್ಯಾಪ್ತಿಯಲ್ಲಷ್ಟೇ ಅಲ್ಲದೆ ತೀವ್ರತೆಯಲ್ಲೂ ಹೆಚ್ಚುತ್ತದೆ ಎಂದು ಅವರು ಹೇಳಿದ್ದರು. ಈ ತೀವ್ರತೆಯ ಅನುಭವವನ್ನು ನಾವು ಎಲ್ಲಾ ಕಡೆಯಿಂದಲೂ ಪಡೆಯುತ್ತಿದ್ದೇವೆ. ಪ್ರಳಯದ ಪರಿಣಾಮ ಬಹಳ ಕಠಿಣವಾಗಿದೆ ಹಾಗೂ ನಾವು ಪ್ರತಿಯೊಬ್ಬರೂ ಬಾಧಿತರಾಗಿದ್ದೇವೆ, ಪರೀಕ್ಷಿಸಲ್ಪಟ್ಟಿದ್ದೇವೆ. ಕೇವಲ ಪ್ರಮಾಣವಷ್ಟೇ ಬದಲಾಗುತ್ತದೆ.

ಗುರೂಜಿಯವರು ನಮಗೆ ಮಾರ್ಗದರ್ಶನ ನೀಡುತ್ತಾ ಈ ಪ್ರಳಯವನ್ನು ಎದುರಿಸಲು ನಮ್ಮನ್ನು ಸಜ್ಜುಗೊಳಿಸುತ್ತಿದ್ದಾರೆ. ಧ್ಯಾನ ಮಾಡಿ ಮತ್ತು ಸಕಾರಾತ್ಮಕರಾಗಿ; ನಿಮ್ಮ ಭಾವನೆಗಳನ್ನು ಸಕಾರಾತ್ಮಕಗೊಳಿಸಿಕೊಳ್ಳಿ, ನಿಮ್ಮ ಆಲೋಚನೆಗಳನ್ನು ಸಕಾರಾತ್ಮಕಗೊಳಿಸಿಕೊಳ್ಳಿ ಎಂದು ಅವರು ಹೇಳಿದ್ದಾರೆ. ನಾವು ಬದಲಾಗಬೇಕು, ಪರಿವರ್ತನೆ ಆಗಬೇಕು ಎಂದು ಅವರು ಹೇಳಿದ್ದಾರೆ. ಪರಿವರ್ತನೆ, ಈ ಪ್ರಳಯದಿಂದ ಪಾರಾಗಲು ನಮಗೆ ಸಹಕಾರಿಯಾಗುತ್ತದೆ. ದೇವರಿಗೆ ಶರಣಾಗಿ; ಅವನು ನಮ್ಮ ಜೀವನವನ್ನು ನಿರ್ವಹಿಸಲಿ.

ನಾವು ಎಲ್ಲರೂ ತಪೋನಗರದಲ್ಲಿ ವಾಸ ಮಾಡಲು ಸಾಧ್ಯವಿಲ್ಲ ಎಂಬ ವಿಚಾರದ ಬಗ್ಗೆ ಮಾತನಾಡುತ್ತ ಅವರು ಹೇಳಿದರು, "ನೀವು ಎಲ್ಲೇ ಇದ್ದರೂ, ಪ್ರಪಂಚದ ಯಾವುದೇ ಭಾಗದಲ್ಲಿದ್ದರೂ, ತಪೋನಗರ ನಿಮ್ಮೊಳಗಿರಲು ಸಾಧ್ಯ. ನೀವು ತಪೋನಗರವನ್ನು ನಿಮ್ಮೊಂದಿಗೆ ಸದಾ ಕೊಂಡೊಯ್ಯಬಹುದು." ಅವರ ಮಾತುಗಳು ಇಂದಿನ ಪರಿಸ್ಥಿತಿಗೆ ಇನ್ನೂ ಹೆಚ್ಚು ಪ್ರಸ್ತುತವಾಗಿದೆ. ನಾವು ಸದಾ ಮತ್ತು ಯಾವುದೇ ಸಮಯದಲ್ಲೂ ತಪೋನಗರಕ್ಕೆ ಮಾನಸಿಕವಾಗಿ ಸಂಪರ್ಕಗೊಂಡು ಚೈತನ್ಯಗಳನ್ನು ಪಡೆಯಬಹುದಾಗಿದೆ.

ತಮ್ಮ ಶರೀರವನ್ನು ತ್ಯಜಿಸುವ ಮುನ್ನ ಅವರು, "ನಾನು ಸೂಕ್ಷ್ಮ ಮಟ್ಟದಿಂದ, ನಿಮ್ಮೆಲ್ಲರನ್ನೂ ವೈಯಕ್ತಿಕವಾಗಿ ನೋಡಿಕೊಳ್ಳುತ್ತೇನೆ," ಎಂದು ನಮಗೆ ವಾಗ್ದಾನ ಮಾಡಿದ್ದಾರೆ. ಅವರು ಇಂದಿಗೂ ಸಹ ನಮ್ಮೊಂದಿಗಿದ್ದಾರೆ, ಪ್ರಳಯ ಸಮಯವನ್ನು ಎದುರಿಸುತ್ತಿರುವ ಈ ಸಮಯದಲ್ಲಿ ಮತ್ತು ವೈಯಕ್ತಿಕ ಜೀವನದಲ್ಲಿಯೂ ಪ್ರತಿಯೊಬ್ಬರನ್ನೂ ಎತ್ತಿ ಹಿಡಿದಿದ್ದಾರೆ. ನಮಗೆ ಯಾವುದೇ ಸಮಯದಲ್ಲಿ ಅತ್ಯುತ್ತಮವಾದುದೇನು ಎಂದು ಅವರಿಗೆ ತಿಳಿದಿದೆ ಹಾಗೂ ನಮ್ಮ ಜೀವನದ ಎಲ್ಲವನ್ನೂ ಅತಿ ಸೂಕ್ಷ್ಮವಾಗಿ ನೋಡಿಕೊಳ್ಳುತ್ತಾರೆ. ಅವರ ಪ್ರೀತಿ ಮತ್ತು ಅನುಗ್ರಹ ನಮ್ಮನ್ನು ರಕ್ಷಿಸಿ ಕಾಪಾಡುತ್ತದೆ ಮತ್ತು ಈ ಪ್ರಳಯದ ಯಾನಕ್ಕೆ ಸಹಾಯ ಮಾಡುತ್ತದೆ.

ಗುರೂಜಿಯವರು ನಮ್ಮ ಜೀವನದ ಲಂಗರು. ಅವರ ಮಹಾಸಮಾಧಿಯ ದಿನದಂದು ಅವರಿಗೆ ನಮ್ಮ ಕೃತಜ್ಞತೆಯನ್ನು ಸಲ್ಲಿಸುತ್ತಾ ಅವರ ಬೆಳಕಿನಲ್ಲಿ ಜೀವಿಸುವೆವೆಂದು ಸಂಕಲ್ಪ ಮಾಡೋಣ. ■

## ಪರಿಪೂರ್ಣ ಗುರು

**ಅಪೂರ್ವ ದೇಶ್‌ಪಾಂಡೆ; ಅನು: ಕಾಂಚನಲತಾ**

ಎಂಟು ವರ್ಷಗಳು ಕಳೆದಿವೆ. ಕೊನೆಗೂ ವಸ್ತುಸ್ಥಿತಿ ಮನವರಿಕೆ ಆದಾಗ, ನಾನು ಸ್ತಂಭೀಭೂತಳಾಗಿ ನನ್ನ ಫೋನ್ ಅನ್ನು ಶೂನ್ಯವಾಗಿ ದಿಟ್ಟಿಸುತ್ತಾ ಕುಳಿತಿದ್ದೆ. ನನ್ನ ಮನದೊಳಗಿನ ಅವಲೋಕನದಿಂದಾಗಿ ಅದುಮಿಟ್ಟಿದ್ದ ಭಾವನೆಗಳು ಮುಂದೆ ಬಂದುವು. ಒಂದು ನಮ್ರ ಪ್ರತಿಭಟನೆಯಲ್ಲಿರುವಂತೆ ಭಾಸವಾಗಿ, ನನ್ನ ಭಾವಣೆಯ ಕಡೆ ತಲೆ ಎತ್ತಿ ನೋಡಿದೆ. ಏಕೆ?

ಗುರೂಜಿಯವರ ಭೇಟಿ ನನ್ನ ಜೀವನದಲ್ಲಿ ಘಟಿಸಿದ ಅತ್ಯುತ್ತಮ ಸಂಗತಿ. ಗುರೂಜಿಯವರನ್ನು ಭೇಟಿಯಾಗದೇ ಇದ್ದಿದ್ದರೆ, ನಾನು ಬೇರೆಯೇ ರೀತಿಯ ಜೀವನ ಸಾಗಿಸುತ್ತಿರುತ್ತಿದ್ದೆ, ಅಂತಿಮ ಉದ್ದೇಶವೇ ಇಲ್ಲದ ಜೀವನ. ನಾವೆಲ್ಲರೂ ತಿಳಿದುಕೊಂಡಿರುವಂತೆ, ಗುರೂಜಿಯವರು, ಅವರ ಹಿಂದಿನ ಎಲ್ಲಾ ಜೀವನಗಳಲ್ಲಿ ಒಬ್ಬ ಮಹಾನ್ ವ್ಯಕ್ತಿಯಾಗಿದ್ದು, ಆ ಗುಣಗಳನ್ನೇ ಈ ಜೀವನದಲ್ಲಿಯೂ ಮುಂದುವರೆಸಿಕೊಂಡು ಹೋಗಿದ್ದರು. ಗುರೂಜಿಯವರು ಇದಕ್ಕೂ ಮುಂಚೆ ಈಜಿಪ್ಟ್ ದೇಶದ ಒಬ್ಬ ಶ್ರೇಷ್ಠ ಫೇರೋ (Pharaoh – ಪ್ರಾಚೀನ ಈಜಿಪ್ಟ್ ಅರಸರ ಹೆಸರು) ಆಗಿದ್ದರು ಹಾಗೂ ಆ ಫೇರೋವಿನ ನೈಜ ಸ್ವಭಾವದಂತೆ, ಅವರು ತುಂಬಾ ಗಾಂಭೀರ್ಯದಿಂದ ವರ್ತಿಸುತ್ತಿದ್ದರು, ಅವರ ನಡಿಗೆ ಕೂಡ ಅಕ್ಷರಶಃ ಭವ್ಯವಾಗಿರುತ್ತಿತ್ತು!

ಗುರೂಜಿಯವರು, ನಮಗೆ ಶಂಬಲದ ಎರಡನೇ ನಿಯಮವನ್ನು ಕೊಟ್ಟ ಕಣ್ವ ಮಹರ್ಷಿ ಕೂಡ ಆಗಿದ್ದರು. ನಾವೆಲ್ಲರೂ ಒಂದಲ್ಲ ಒಂದು ಬಾರಿ ಗುರೂಜಿಯವರ ಸಂದರ್ಶನ ಕೋಣೆಗೆ ಹೋಗಿದ್ದೇವೆ ಹಾಗೂ ನಮ್ಮ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಕಂಡುಕೊಂಡ ಅನುಭವವಾಗಿರುತ್ತದೆ ಅಥವ ಅವರ ಮಾತುಗಳನ್ನು ಕೇಳಿರುತ್ತೇವೆ ಮತ್ತು ಇಂತಹ ಅನುಭವವಾಗಿರುತ್ತದೆ. ತತ್‌ಕ್ಷಣವೇ ನಮ್ಮೊಳಗೆ ಹಾಗೂ ಸುತ್ತಮುತ್ತಲೂ ನೆಮ್ಮದಿ ಕಾಣುತ್ತೇವೆ.

ಗುರೂಜಿಯವರು ಪ್ರತಿಯೊಬ್ಬರ ಜೀವನದಲ್ಲೂ ಶಾಂತಿ, ವಿವೇಕ ಹಾಗೂ ಬಣ್ಣವನ್ನು ತುಂಬಿದರು. ಈ ಮಹಾನ್ ಮಾಸ್ಟರ್‌ಅವರು ತರಗತಿಯಲ್ಲಿ ಮತ್ತು ಅವರ ಪುಸ್ತಕಗಳಲ್ಲಿ ಹೇಳಿದುದನ್ನು ಗ್ರಹಿಸಿಕೊಂಡ ನಂತರ, ನಮ್ಮ ಬದುಕು ಬೇರೆಯೇ ರೀತಿ ಕಾಣುತ್ತಿತ್ತು.

ಗುರೂಜಿ ಹಲವಾರು ಬಾರಿ ಭೇಟಿಯಾಗಿದ್ದ ವೈದ್ಯರೊಬ್ಬರನ್ನು ನಾನು ಇತ್ತೀಚೆಗೆ ಸಂಧಿಸಿದ್ದೆ. ಒಬ್ಬ ವೈದ್ಯರಾಗಿ ಅವರು ಅನೇಕ ರೋಗಿಗಳನ್ನು ನೋಡುತ್ತಿದ್ದಿರಬಹುದಾದರೂ, ಅವರು ಗುರೂಜಿಯವರನ್ನು ಇನ್ನೂ ನೆನಪಿನಲ್ಲಿಟ್ಟುಕೊಂಡಿದ್ದರು ಮತ್ತು ಅವರ ಬಗ್ಗೆ ಅತ್ಯಂತ ಗೌರವದಿಂದ ಮಾತನಾಡಿದರು. ಗುರೂಜಿ ಹಾಗೂ ವೈದ್ಯರ ನಡುವೆ ನಡೆದ ಸಂಭಾಷಣೆಗಳು ಖಂಡಿತಾ ಆಧ್ಯಾತ್ಮದ ವಿಷಯಗಳಾಗಿರಲು ಸಾಧ್ಯವಿಲ್ಲ ಆದರೆ ಒಂದು ಮಟ್ಟದಲ್ಲಿ ಆ ವೈದ್ಯರು ಗುರೂಜಿ ಒಬ್ಬ ಸಾಧಾರಣ ವ್ಯಕ್ತಿಯಲ್ಲ ಎಂದು ಮನಗಂಡಿರಬಹುದು. ಅವರ ಅಖಂಡ ನಮ್ರತೆಯಿಂದ ಕೂಡಿದ ಇಂತಹ ಪರಸ್ಪರ ಮಾತುಕತೆಗಳಲ್ಲಿ ಅವರ ದಿವ್ಯತೆ ಹೊಳೆಯುತ್ತಿತ್ತು ಮತ್ತು ಅದು ಬಹುಶಃ ಆ ವೈದ್ಯರ ಮನಮುಟ್ಟಿತ್ತು.

ಗುರೂಜಿಯವರು ತಮ್ಮ ಭೌತಿಕ ಶರೀರವನ್ನು ಬಿಟ್ಟಿರುವುದನ್ನು ನಾನು ಅರಿತುಕೊಂಡಿದ್ದೇನೆ, ನಾವೆಲ್ಲ ಬಹಳವಾಗಿ ಕಳೆದುಕೊಂಡ ಅವರ ಉಪಸ್ಥಿತಿಯ ಬಗ್ಗೆ ನನಗೆ ಅರಿವಿದೆ, ಆದರೆ ಅವರು ನಮ್ಮನ್ನು ತೊರೆದಿಲ್ಲ. ಅವರು ನಮ್ಮೆಲ್ಲರನ್ನೂ ಸಲಹುತ್ತಾ ಇನ್ನೂ ಇಲ್ಲೇ ಇದ್ದಾರೆ. ಅವರು ನಮ್ಮನ್ನು ಪ್ರೀತಿಸುತ್ತಾರೆ ಮತ್ತು ಅವರು ನಮ್ಮಿಂದ ಕೇವಲ ಮಾನಸಿಕ ಸಂಪರ್ಕದಷ್ಟು ದೂರದಲ್ಲಿಯೇ ಇದ್ದಾರೆ! ■

## ಪ್ರಶ್ನೋತ್ತರಗಳು

**ಸಂ: ಶೋಭಾ ಕೆ. ರಾವ್; ಅನು: ಪಾಂಡುರಂಗ**

**ಪ್ರ: ನಾನು ಏನೇ ಮಾಡುವಾಗಲೂ, ನಾನು ಮಾಡುತ್ತಿರುವುದು ಸರಿಯೇ ಅಥವಾ ಸರಿ ಇಲ್ಲವೇ ಎಂದು ಸತತವಾಗಿ ಯೋಚಿಸುತ್ತಿರುತ್ತೇನೆ?**

ಉ: ಈ ರೀತಿಯ ಅನುಭವ ನಮ್ಮಲ್ಲಿ ಹೆಚ್ಚಿನವರಿಗೆ ಆಗಿರುತ್ತದೆ. ನಾವು ನಮ್ಮ ಅಂತರ್ ಗ್ರಹಣ ಶಕ್ತಿಯಿಂದ ಮಾರ್ಗದರ್ಶನ ಪಡೆಯಬೇಕು. ನಾವು ನಮ್ಮ ಅಂತರ್ ವಾಣಿಯನ್ನು ಆಲಿಸಬೇಕು, ಆಗ ನಾವು ತಪ್ಪು ಮಾಡುವುದಿಲ್ಲ. ಇಲ್ಲಿ ಇನ್ನೊಂದು ಅಂಶವಿದೆ. ನಾವು ತಪ್ಪು ಮಾಡುವುದನ್ನು ಆರಿಸಿಕೊಂಡಾಗ, ನಮಗೆ ಖಂಡಿತವಾಗಿಯೂ ಅದು ತಿಳಿದಿರುತ್ತದೆ. ಹಾಗಾಗಿ, ನಮ್ಮ ಅಂತರ್ ವಾಣಿಯನ್ನು ಅನುಸರಿಸುವುದರ ಜೊತೆಗೆ, ಧ್ಯಾನ ಮಾಡಬೇಕು ಮತ್ತು ಬೆಳೆಯಬೇಕು. ನಾವು ಬೆಳೆಯುತ್ತಾ ಹೋದಂತೆ ಮತ್ತು ನಮ್ಮನ್ನು ನಾವು ಶುದ್ಧೀಕರಿಸಿಕೊಂಡಂತೆ, ನಮ್ಮ ಯೋಚನೆಗಳು ಸ್ಪಷ್ಟವಾಗತೊಡಗುತ್ತವೆ ಮತ್ತು ನಮ್ಮ ಅಂತರ್ ಗ್ರಹಣ ಶಕ್ತಿ ತೀಕ್ಷ್ಣಗೊಳ್ಳತೊಡಗುತ್ತದೆ. ನಂತರ ತಂತಾನೆ ನಾವು ಸರಿಯಾದುದನ್ನೇ ಮಾಡುವ ಹಂತವನ್ನು ತಲುಪುತ್ತೇವೆ. ನಂತರ ನಮಗೆ ಇದು ರೂಢಿಯಾಗಿ ಬಿಡುತ್ತದೆ. ಬೆಳಕಿನ ಜೊತೆಗೆ ಶ್ರುತಿಗೊಂಡು ನಾವು ಜೀವಿಸುತ್ತೇವೆ. ಆದರೆ ಪ್ರಾರಂಭದಲ್ಲಿ ಪ್ರಜ್ಞಾಪೂರ್ವಕ ಪ್ರಯತ್ನಗಳು ಬೇಕಾಗುತ್ತವೆ.

**ಪ್ರ: ಆಧ್ಯಾತ್ಮಿಕವಾಗಿ ಪರಿವರ್ತನೆಗೊಂಡ ಆತ್ಮಗಳು ಮಾತ್ರ ಬೆಳಕಿನ ಯುಗವನ್ನು ಪ್ರವೇಶಿಸುತ್ತವೆ. ಪರಿವರ್ತನೆ ಆಗದೆ ಉಳಿದಿರುವ ಆತ್ಮಗಳಿಗೆ ಏನಾಗುತ್ತದೆ?**

ಉ: ನಾವು ಗುರೂಜಿಯವರಿಂದ ಅರ್ಥ ಮಾಡಿಕೊಂಡಿರುವಂತೆ, ಯಾರನ್ನು ಬಿಟ್ಟು ಬಿಡುವುದಿಲ್ಲ. ದೇವರ ಪ್ರಪಂಚದಲ್ಲಿ ಯಾರೂ ಹೊರಗುಳಿಯುವುದಿಲ್ಲ. ಋಷಿಗಳ ಪ್ರಪಂಚದಲ್ಲಿ ಯಾರೂ ಹೊರಗುಳಿಯುವುದಿಲ್ಲ. ಪ್ರತಿಯೊಬ್ಬರನ್ನೂ ಪ್ರೀತಿಯಿಂದ ಮಾರ್ಗದರ್ಶನ ಮಾಡಲಾಗುತ್ತದೆ. ನಾವು ಪರಿವರ್ತನೆ ಹೊಂದಲು ಅವಕಾಶಗಳು ಯಾವಾಗಲೂ ಇದ್ದೇ ಇರುತ್ತವೆ. ಕೆಲವೊಂದು ವ್ಯಕ್ತಿಗಳು ಅವರ ಕಾಲಕ್ಕಿಂತ ಮುಂದೆ ಸಾಗಿ ಜೀವಿಸುತ್ತಿರಬಹುದು, ಆದರೆ ವಿಶ್ವವಿಡೀ ಸತ್ಯ ಯುಗಕ್ಕೆ ಪ್ರವೇಶಿಸಬೇಕಾದರೆ, ಬಹುಪಾಲು ಜನರು ಬೆಳಕನ್ನು ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ, ತಮ್ಮ ಕಾಲಕ್ಕಿಂತ ಮುಂದೆ ಸಾಗಿ ಜೀವನ ಮಾಡಬೇಕಾಗುತ್ತದೆ. ಆಗ ಹೊಸ ಯುಗವು ಮೂಡುತ್ತದೆ. ನಾವು ಈಗಲೇ ಆಯ್ಕೆ ಮಾಡಿಕೊಳ್ಳಬಹುದು ಮತ್ತು ಇನ್ನೊಂದು ಮಟ್ಟದಲ್ಲಿ ಕೆಲಸ ಮಾಡುತ್ತಿರುವ ಋಷಿಗಳಿಗೆ ಸಹಾಯ ಮಾಡಬಹುದು. ಜನರಲ್ಲಿ ಹೊಸ ಯುಗದ ಅರಿವು ಮೂಡಿಸಲು ಋಷಿಗಳು ಬಹಳಷ್ಟು ಚೈತನ್ಯಗಳನ್ನು ಹರಡುತ್ತಿದ್ದಾರೆ.

**ಪ್ರ: ಬೆಳಕು ನಮಗೆ ಮಾರ್ಗದರ್ಶನ ಮಾಡಬಹುದಾದರೆ, ಮಾನವ ನಾಯಕರ ಅಗತ್ಯ ಇದೆಯೆ?**

ಉ: ನಾನು ಅರ್ಥ ಮಾಡಿಕೊಂಡಿರುವುದು ಹೀಗೆ: ಮಾನವ ವ್ಯವಸ್ಥೆಯನ್ನು ನಡೆಸಲು ಅಥವಾ ನಿರ್ವಹಿಸಲು, ನಮಗೆ ಮಾನವ ನಾಯಕರ ಅಗತ್ಯ ಇದೆ. ಉದಾಹರಣೆಗೆ ಒಂದು ಶಾಲೆಯನ್ನು ನಡೆಸಲು ನಮಗೆ ಮುಖ್ಯೋಪಾಧ್ಯಾಯರು ಬೇಕು. ಆಧ್ಯಾತ್ಮಿಕ ದೃಷ್ಟಿಕೋನದಿಂದ ನೋಡುವುದಾದರೆ, ನಮಗೆ ಆಧ್ಯಾತ್ಮಿಕ ನಾಯಕ ಬೇಕು, ಬೆಳಕನ್ನು ಅರಿತಿರುವ ಒಬ್ಬ ಗುರು, ಬೆಳಕನ್ನು ಅನುಭವಿಸಿರುವ ಗುರು, ನಮ್ಮನ್ನು ಬೆಳಕಿನೆಡೆಗೆ ಕರೆದೊಯ್ಯುವ ಗುರು ಬೇಕು, ಏಕೆಂದರೆ ನಾವು ಅಜ್ಞಾನಿಗಳು, ನಮಗೆ ಬೆಳಕಿನ ಅರಿವಿಲ್ಲ. ಬೆಳಕು ಇದೆ, ನಾವು ಬೆಳಕನ್ನು ಅನುಭವಿಸಬಹುದು ಮತ್ತು ಬೆಳಕಿನೊಂದಿಗೆ ಒಂದು ಬಾಂಧವ್ಯವನ್ನು ಹೊಂದಬಹುದು ಎಂದು ಅವನು ನಮ್ಮಲ್ಲಿ ಅರಿವು ಮೂಡಿಸುತ್ತಾನೆ. ಅವನು ಮಾರ್ಗದರ್ಶನ ಮಾಡುತ್ತಾನೆ. ಯಾವಾಗ ನಾವು ಬೆಳಕಿನ ಅನುಭವ ಪಡೆಯಲು ಪ್ರಾರಂಭಿಸುತ್ತೇವೆಯೋ, ಯಾವಾಗ ಬೆಳಕಿನ ಜೊತೆಗೆ ಪ್ರಬಲವಾದ ಬಾಂಧವ್ಯವನ್ನು ಬೆಳೆಸಿಕೊಳ್ಳುತ್ತೇವೆಯೋ, ಆಗ ಬೆಳಕು ನಮಗೆ ಮಾರ್ಗದರ್ಶನ ಮಾಡಲು ಪ್ರಾರಂಭಿಸುತ್ತದೆ.


**ಪ್ರ: ನಾವು ಪುಸ್ತಕವೊಂದರಲ್ಲಿ ಓದಿದ, ಯಾವುದಾದರೊಂದು ಕಾರ್ಯಾಗಾರದಲ್ಲಿ ಅಥವ ಯಾರಾದರೊಬ್ಬ ಮಾಸ್ಟರ್‌ರಿಂದ ಅಥವ ಬೇರೊಂದು ಮಾರ್ಗದಿಂದ ಕಲಿತ ತಂತ್ರವನ್ನು ಅಭ್ಯಾಸ ಮಾಡಬಹುದೇ?**

ಉ: ಪುಸ್ತಕಗಳಿಂದ ದೊರೆಯುವ ತಂತ್ರಗಳನ್ನು ಅಭ್ಯಾಸ ಮಾಡುವುದನ್ನು ತಪ್ಪಿಸಿರಿ ಎಂದು ಗುರೂಜಿ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಒಬ್ಬ ಗುರುವಿನಿಂದ ಒಂದು ತಂತ್ರವನ್ನು ಕಲಿಯುವುದು ಮತ್ತು ಒಬ್ಬ ಗುರುವಿನಿಂದ ಮಂತ್ರವನ್ನು ಪಡೆಯುವುದು ಅತ್ಯುತ್ತಮವೆಂಬುದು ನನ್ನ ವ್ಯಯಕ್ತಿಕ ಅನಿಸಿಕೆ. ಒಬ್ಬ ಗುರುವಿನಿಂದ ಕಲಿತಾಗ ಹಾಗೂ ಅದನ್ನು ಅಭ್ಯಾಸ ಮಾಡುವಾಗ ಯಾವುದಾದರೂ ಸಮಸ್ಯೆ ಎದುರಾದಲ್ಲಿ, ಅವರನ್ನು ಕಂಡು ಪರಿಹಾರ ಪಡೆದುಕೊಳ್ಳುವ ಅವಕಾಶ ಇರುತ್ತದೆ. ನನ್ನ ಅಭಿಪ್ರಾಯದಲ್ಲಿ, ಲಭ್ಯವಿರುವ ಎಲ್ಲಾ ಮೂಲಗಳಿಂದಲೂ ಜ್ಞಾನ ಸಂಪಾದನೆ ಮಾಡುವ ತೆರೆದ ಮನಸ್ಸು ನಮಗಿರಬೇಕು. ಆದರೆ ಆಧ್ಯಾತ್ಮಿಕ ಅಭ್ಯಾಸದ ವಿಷಯಕ್ಕೆ ಬಂದರೆ, ನಮ್ಮ ಗುರುವಿಗೆ ಬದ್ಧರಾಗಿರಬೇಕು ಎಂಬುದು ನನ್ನ ಅನಿಸಿಕೆ. ■


## ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| Higher Communication & Other Realities | 100/- |
| Light Body & Other Realities | 100/- |
| Master-Pupil Talks | 60/- |
| Master-Pupil Talks - Vol 2 | 75/- |
| iGuruji Vol 1,3,4 & 7 | each 150/- |
| iGuruji - Vol 2 | 120/- |
| iGuruji - Vol 5 | 100/- |
| iGuruji - Vol 6 | 75/- |
| Living in the Light of My Guru | 220/- |
| How to Meditate | 50/- |
| Dhyana Yoga | 50/- |
| Descent of Soul | 50/- |
| Practising Shambala Principles | 50/- |
| Astral Ventures of A Modern Rishi | 50/- |
| Channelled Knowledge from the Rishis-Vol 2 | 150/- |
| Channelled Knowledge from the Rishis-Vol 3 & 4 | each 200/- |
| Guruji Speaks Part - I & II | each 200/- |
| Guruji Speaks (Vol 3) | 150/- |
| Guruji Speaks (Vol 4) | 250/- |
| Guruji Speaks (Vol 5 & 7) | each 200/- |
| The Book of Reflections - Vol 1 & 2 | each 200/- |
| The Book of Reflections - Vol 3 | 150/- |
| Meditators on Meditations | 75/- |
| Meditators on Experiences | 75/- |
| Meditational Experiences - Vol 1 & 2 | each 150/- |
| Awareness | 60/- |
| Living in Light | 10/- |
| Light | 10/- |
| Quotes from the Rishis - Vol 1 & 2 | each 100/- |
| Pyramid Revelations | 100/- |
| Thus Spoke Guruji Krishnananda - Vol 1 & 4 | each 200/- |
| Thus Spoke Guruji Krishnananda - Vol 2 & 3 | each 250/- |
| ಬೆಳಕಿಗೆ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಋಷಿಗಳಿಂದ ಬಂದ ಜ್ಞಾನ – ಭಾಗ 2 | 150/- |
| ಗುರು–ಶಿಷ್ಯರ ಸಂಭಾಷಣೆ | 60/- |
| ಐ–ಗುರೂಜಿ ಭಾಗ 1 | 150/- |
| ಐ–ಗುರೂಜಿ ಭಾಗ 2 | 120/- |
| ಹೊಸ ಯುಗದ ವಾಸ್ತವಗಳು | 120/- |
| ಉನ್ನತ ಸಂಪರ್ಕಗಳು | 100/- |
| ಅನಿಸಿಕೆಗಳು | 120/- |
| ಧ್ಯಾನ ಮಾಡುವುದು ಹೇಗೆ | 50/- |
| ಧ್ಯಾನ ಯೋಗ | 50/- |
| ಆತ್ಮದ ಅವರೋಹಣ | 50/- |
| ಶಂಬಲ ನಿಯಮಗಳ ಅಭ್ಯಾಸ | 50/- |
| ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | 50/- |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ಬೆಳಕು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ಬೆಳಕಿನ ಶರೀರ ಮತ್ತು ಇತರ ವಾಸ್ತವಗಳು | 100/- |
| प्रकाशवाट (Marathi) | 150/- |
| आयगुरूजी (Marathi) | 100/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| शंबला तत्त्वांचा अभ्यास (Marathi) | 50/- |
| एका आधुनिक ऋषीचे सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| प्रकाश (Marathi) | 10/- |
| उच्चस्तरीय संवाद आणि इतर सत्ये (Marathi) | 100/- |
| गुरु–शिष्य संवाद (Marathi) | 60/- |
| ध्यान कैसे करे (Hindi) | 50/- |
| ध्यान-योग (Hindi) | 50/- |
| प्रकाश (Hindi) | 10/- |
| प्रकाशमय जीवन (Hindi) | 10/- |
| प्रकाश की ओर (Hindi) | 150/- |
| आत्मा का अवतरण (Hindi) | 50/- |
| தியானம் செய்வது எப்படி | 50/- |
| ஒளியின் வாயில்கள் | 200/- |
| தியான யோகம் | 50/- |
| ஆத்மாவின் அவரோகணம் | 50/- |
| நவீன ரிஷி ஒருவரின் சூஷ்ம சாகசங்கள் | 50/- |
| சம்பலா நியமங்களின் அப்பியாசங்கள் | 50/- |
| ధ్యానం చేయ్యడం ఎలా | 50/- |
| కాంతికి ద్వారములు | 100/- |

Published: 21st of Every Month. RNI. No. KARKAN/2003/13739 Regd. Postal Regn. No. KRNA/BGE/1124/ 2020-2022
Date of posting Newsletter-25th or 27th or 29th of Every Month. Posted at Bangalore PSO, Bg-560026 No. of Pages-8



ಗುರೂಜಿ ಕೃಷ್ಣಾನಂದ (1939 - 2012)

### ಮಾನಸ ಫೌಂಡೇಶನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

### ತಪೋನಗರ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

### ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

### ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ ಮಾನಸದಲ್ಲಿ ಋಷಿಗಳ ಮಾರ್ಗದರ್ಶನದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

### ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

### ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

### ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('Manasa Foundation' ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು. 80–G ನಿಯಮದಡಿ ಆದಾಯ ತೆರಿಗೆಯ ರಿಯಾಯಿತಿ ಇದೆ.)

## ಸಾಧಕರ ಆಧ್ಯಾತ್ಮಿಕ ಅನುಭವಗಳು ಮತ್ತು ಅವರ ಪತ್ರಗಳಿಂದ ಆಯ್ದ ಭಾಗಗಳು

ಸಂ. ಶೋಭಾ ಕೆ. ರಾವ್; ಅನು: ಸ್ವರ್ಣಲತಾ

ಆಗಸ್ಟ್ 6 ರಂದು, ಗುರೂಜಿ ಹಾಗೂ ಜಯಂತ್ ಸರ್ ಕೆಲವು ದಿವ್ಯ ವ್ಯಕ್ತಿಗಳನ್ನು ಆಹ್ವಾನಿಸುತ್ತಿರುವಂತಹ ದೃಶ್ಯವನ್ನು ಕಂಡೆ. ಅವರು ತುಂಬಾ ಸ್ಫುರದ್ರೂಪಿಗಳಂತೆ ಕಂಡರು. ಗುರೂಜಿ ಅವರನ್ನು ಅಪ್ಪಿಕೊಳ್ಳುವುದನ್ನು ನಾನು ನೋಡಿದೆ. ಅಲ್ಲಿ ಎರಡು ದೊಡ್ಡ ಚೌಕಾಕಾರದ ಕೊಳಗಳಿರುವ ಬಗ್ಗೆ ನಮ್ಮ ಸ್ವಯಂ ಸೇವಕರೊಬ್ಬರು ತಿಳಿಸಿದರು. ಆ ಕೊಳಗಳನ್ನು ತಲುಪಲು ನಮ್ಮ ತಪೋನಗರದಲ್ಲಿ ಇರುವಂತಹದೇ ಕಾಲು ದಾರಿಯಲ್ಲಿ ನಾನು ನಡೆದು ಹೋಗಬೇಕಿತ್ತು. ನನಗೆ ಅದು ತಪೋನಗರ ಎಂದು ಭಾಸವಾಯಿತು. ಜಯಂತ್‌ಜೀ ಅವರು ವ್ಯವಸ್ಥೆ ಮಾಡಿದ್ದ ತರಗತಿಯಲ್ಲಿ ಹಾಜರಾಗಲು ಅನೇಕ ಧ್ಯಾನಿಗಳು ಅಲ್ಲಿ ಕಾದಿದ್ದರು.

– ಮೂರ್ತಿ. ಕೆ. ಇ

ಆಗಸ್ಟ್ 7ರ ಬೆಳಗಿನ ಜಾವ, ಕನಸಿನ ಮಾದರಿಯ ಅನುಭವವಾಯಿತು; ಅಲ್ಲಿ ಗುರೂಜಿ ಮತ್ತು ನಮ್ಮ ಎಲ್ಲಾ ಸ್ವಯಂ ಸೇವಕರನ್ನೂ ನೋಡಿದೆ. ಅಲ್ಲಿ ಒಂದು ಸಭೆ ಅಥವಾ ಒಂದು ಕಾರ್ಯಕ್ರಮದ ತಯಾರಿ ನಡೆಯುತ್ತಿತ್ತು. ಅಲ್ಲಿ ಬಹಳ ಚಟುವಟಿಕೆ ನಡೆಯುತ್ತಿತ್ತು. ಗುರೂಜಿಯವರೊಂದಿಗೆ ಜಯಂತ್‌ಜೀಯವರು ಕೆಲಸ ಮಾಡುತ್ತಿದ್ದರು. ಅಲ್ಲಿ ನನ್ನ ಪತ್ನಿಯನ್ನು ಗುರುತಿಸಿದೆ, ಆದರೆ ಅಲ್ಲಿ ಅವರೊಡನೆ ಎಲ್ಲಾ ಸ್ವಯಂ ಸೇವಕರು ಇದ್ದುದು ನನಗೆ ಖಾತ್ರಿಯಾಗಿತ್ತು. ಎಲ್ಲರೂ ಬಿಳಿಯ ಉಡುಪಿನಲ್ಲಿದ್ದರು.

– ಮನೋಜ್ ಘೋಪ್ರ

ಒಂದು ವರ್ಷದ ಹಿಂದೆ ನಾನು ಜೀವನವನ್ನು ನೋಡುತ್ತಿದ್ದ ರೀತಿಗೂ, ಇಂದು ನೋಡುವ ರೀತಿಗೂ ವ್ಯತ್ಯಾಸವಿದೆ. ಈಗ ನಾನು ಜೀವನವನ್ನು ವಿಕಾಸಗೊಂಡ ದೃಷ್ಟಿ ಕೋನದಿಂದ ನೋಡುತ್ತೇನೆ. ಭಗವಂತ ಯಾವಾಗಲೂ ನನ್ನ ಕೋರಿಕೆಗಳನ್ನು ಕೇಳಿಸಿಕೊಳ್ಳುತ್ತಾನೆ ಮತ್ತು ಅದಕ್ಕೆ ಉತ್ತರಿಸುತ್ತಾನೆ. ಆದರೆ ಅದನ್ನು ಅರ್ಥ ಮಾಡಿಕೊಳ್ಳುವುದೇ ನಮಗಿರುವ ಸವಾಲು.

– ಅರುಣ ತೆಲಪೋಲು

ಪ್ರತಿಯೊಬ್ಬರನ್ನೂ ವೈಯುಕ್ತಿಕವಾಗಿ ಮಾರ್ಗದರ್ಶಿಸುತ್ತೇನೆ ಎಂಬುದೇ ಗುರೂಜಿಯವರ ಕೊನೆಯ ಸಂದೇಶವಾಗಿತ್ತು. ಈಗ ಅವರ ಮಾರ್ಗದರ್ಶನದ ಅನುಭವವನ್ನು ಪ್ರತಿ ಕ್ಷಣವೂ ಪಡೆಯುತ್ತಿದ್ದೇನೆ. ಅದು ಮುಂಚೆಯೂ ಇತ್ತು ಆದರೆ ಈಗ ಅದು ಪ್ರತಿನಿತ್ಯದ ಚಟುವಟಿಕೆಯಾಗಿದೆ. ನಾನು ಖಂಡಿತವಾಗಿಯೂ ಅವರ ಅನುಗ್ರಹಕ್ಕೆ ಪಾತ್ರಳಾಗಿದ್ದೇನೆ.

– ಶಾಂತ ಕುಮಾರಿ ಹೆಚ್. ಎಸ್

ಕೆಲವು ದಿನಗಳ ಹಿಂದೆ ನಾನು ಧ್ಯಾನ ಮಾಡುತ್ತಿದ್ದಾಗ, ಇದ್ದಕ್ಕಿದ್ದಂತೆ ಒಬ್ಬ ತಿಳಿಹಳದಿ ಬಣ್ಣದ ವ್ಯಕ್ತಿ ನನ್ನ ಪಕ್ಕದಲ್ಲಿ ನಿಂತಂತಹ ಅನುಭವವಾಯಿತು. ಓರಿಯೆಂಟೇಷನ್ ತರಗತಿಯಲ್ಲಿ, ಕಲ್ಕಿ ಭಗವಾನ್ ನಮ್ಮ ಮುಂದೆ ನಿಂತಿರುವಂತೆಯೂ, ಅವರಿಗೆ ನಮ್ಮ ಚೈತನ್ಯವನ್ನು ಕಳುಹಿಸಿ, ಅವರಿಂದ ಬೆಳಕನ್ನು ಪಡೆಯುವಂತೆಯೂ ಊಹಿಸಿಕೊಳ್ಳಲು ತಿಳಿಸಲಾಗಿತ್ತು. ಇದು ಅದೇ ರೀತಿಯದ್ದಾಗಿತ್ತು. ನಿಜವಾಗಿಯೂ ಕಲ್ಕಿ ಭಗವಾನ್ ನನ್ನ ಪಕ್ಕದಲ್ಲಿ ನಿಂತು ಬೆಳಕು ಹರಿಸಿದರೇ? ಅದಲ್ಲದೆ, ಆಕೃತಿಯು ಮಸುಕಾಗಿದ್ದುದರಿಂದ, ನಾನು ನನ್ನ ಅಂತರ್ ಗ್ರಹಣ ಶಕ್ತಿಯನ್ನು ಕೇಳಿದೆ ಮತ್ತು ಅದು ನಿಶ್ಚಯವಾಗಿಯೂ ಕಲ್ಕಿ ಭಗವಾನರೇ ಎಂದು ಹೇಳಿತು. ನಾನು ಸಂತೋಷಗೊಂಡೆ ಮತ್ತು ಸಂಭ್ರಮಪಟ್ಟೆ!

– ರತ್ನಕಲಾ ಪಕ್ಕಲಾ

ನಾನು ಕೃಷ್ಣ ಜನ್ಮಾಷ್ಟಮಿಯ ನಂತರ ವಿಶೇಷ ಧ್ಯಾನ ಮಾಡುತ್ತಿದ್ದಾಗ, ಸಂಪೂರ್ಣವಾದ ಸ್ಥಿರತೆಯೊಡನೆ ಪ್ರಶಾಂತತೆಯ ಅನುಭವವಾಯಿತು. ಇದ್ದಕ್ಕಿದ್ದಂತೆ ಒಂದು ಸುಂದರ ನವಿಲು ತನ್ನ ಗರಿಗಳನ್ನು ಬೀಸಣಿಗೆಯ ಹಾಗೆ ಬೀಸುವ ಪೂರ್ಣ ಪ್ರದರ್ಶನದ ನೋಟವನ್ನು ನನಗೆ ನೀಡಲಾಯಿತು. ಈ ಅಪರೂಪದ ದೃಶ್ಯವನ್ನು ಕಂಡು ನಾನು ಅತ್ಯಂತ ಚಕಿತಳಾದೆ. ಇದು ಕೃಷ್ಣ ನನ್ನೊಡನೆ ಇರುವನೆಂಬುದರ ಸಂಕೇತವೆಂದು ಅವನೇ ತಿಳಿಸಿದ ರೀತಿಯೇ? ನಂತರ ಆಳವಾದ ಪ್ರಶಾಂತತೆ ಹಾಗೂ ಸಮರ್ಪಣಾ ಭಾವದಿಂದ ನನ್ನ ಧ್ಯಾನ ಮುಗಿಯಿತು.

– ವಿದ್ಯಾ ವೀರ್‌ಕರ್

ನಾನು ನನ್ನ ಹಿಂದಿನ ಅಭ್ಯಾಸದ ವರದಿಯನ್ನು ಕಳುಹಿಸಿದಾಗಿನಿಂದ ಋಷಿಗಳು, ಅಮರಾಜಿ ಹಾಗೂ ಗುರೂಜಿಯವರು ನನ್ನ ಸಾಧನೆಗೆ ನಿಜಕ್ಕೂ ಸಹಾಯ ಮಾಡುತ್ತಿರುವಂತೆನಿಸುತ್ತದೆ. ನಾನು ಬೆಳಿಗ್ಗೆ 3.30ಕ್ಕೆ ಎದ್ದು 4.00 ಗಂಟೆಗೆ ಧ್ಯಾನಕ್ಕೆ ಸಿದ್ಧಳಾಗುವಂತೆ ಒಂದು ಪ್ರಚಂಡ ಶಕ್ತಿ ಪ್ರತಿನಿತ್ಯ ಪ್ರಚೋದಿಸುತ್ತಿದೆ. ಈ ಪ್ರಸ್ತುತ ಕಷ್ಟದ ದಿನಗಳಲ್ಲೂ ನಾನು ಆಂತರಿಕವಾಗಿ ಶಾಂತತೆಯಿಂದಿದ್ದು ನನ್ನ ರಕ್ಷಣೆಯನ್ನು ಅವರು ಮಾಡುತ್ತಿರುವುದು ತಿಳಿಯುತ್ತಿದೆ. ನನ್ನನ್ನು ಮಾರ್ಗದರ್ಶಿಸುತ್ತಿರುವ ಜಯಂತ್‌ಜೀ ಮತ್ತು ಹಿರಿಯ ಮಾರ್ಗದರ್ಶಕರಿಗೆ ನನ್ನ ವಂದನೆಗಳು. ಈ ನಮ್ಮ ಅದ್ಭುತವಾದ ಧ್ಯಾನದ ಮಾರ್ಗವನ್ನು ಆರಿಸಿಕೊಂಡಿರುವುದು ನನ್ನ ಅದೃಷ್ಟ ಎಂದು ತಿಳಿಯುತ್ತೇನೆ.

– ನಂದಿತಾ ಪಟೇಲ್

ಲಾಕ್‌ಡೌನ್‌ನಲ್ಲಿ ಒಂದು ತಡ ರಾತ್ರಿ ಕಾರಿನಿಂದ ಏನನ್ನೋ ತರಲೆಂದು ಮನೆಯಿಂದ ಆಚೆ ಬಂದೆ. ನನ್ನ ಬಳಿ ಬಾಗಿಲಿನ ಕೀಲಿಕೈ ಇಲ್ಲದಿರುವುದರ ಅರಿವಿಲ್ಲದೆ, ಬಾಗಿಲನ್ನು ಮುಚ್ಚಿದೆ. ನಾನು ಹೊರಗುಳಿದೆ ಮತ್ತು ಮನೆಯ ಒಳಗೆ ಹೋಗಲು ಯಾವುದೇ ದಾರಿ ಇರಲಿಲ್ಲ. ಬೇರೆ ದಾರಿ ಇಲ್ಲದೆ ಮನೆಯ ಹೊರಗೇ ಉಳಿಯಬೇಕಾಯಿತು. ಇಂತಹ ಸಂದರ್ಭಗಳಲ್ಲಿ 24 ಗಂಟೆಯೂ ಸೇವೆ ಸಲ್ಲಿಸುವ ಲಾಕ್ ಕಂಪನಿಗೆ ಕರೆ ಮಾಡಿದೆ, ಆದರೆ ಲಾಕ್‌ಡೌನ್ ಇದ್ದ ಕಾರಣ ಆ ಕಛೇರಿ ಮುಚ್ಚಿತ್ತು. ನಾನು ಒಬ್ಬ ಮರಗೆಲಸದವನನ್ನು ಸಂಪರ್ಕಿಸಿದಾಗ ಲಾಕ್‌ಡೌನ್ ಇದ್ದರೂ, ತಡರಾತ್ರಿಯಾಗಿದ್ದರೂ ಹತ್ತು ನಿಮಿಷಗಳಲ್ಲಿ ಬಂದು ಬೀಗ ತೆಗೆಯುವುದರ ಮೂಲಕ ಈ ಸಮಸ್ಯೆಯನ್ನು ಬಗೆ ಹರಿಸಿದರು. ಇದು ಒಂದು ಚಮತ್ಕಾರವಲ್ಲದೆ ಮತ್ತೇನಲ್ಲ!

– ವಿನಮ್ರ ಲೋಂಗಾನಿ

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.300/–
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077. ಮಾನಸ ಫೌಂಡೇಶನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 560 077
ಪ್ರಕಾಶನ ಸ್ಥಳ ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 560 077
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ ಎ, ವೆಸ್ಟ್ ಆಫ್ ಕಾರ್ಡ್ ರೋಡ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು–560086. ಫೋನ್: 23359992
ಸಂಪಾದಕರು : ಶ್ಯಾಮಲಾ ದೇವಿ